Reg. No. M. 1550

28–2–1936

IF NOT

*delivered*

*please return to*

"KODAGU"
OFFICE,
MERCARA.

KODAGU

# ಕೊಡಗು

ಅಚ್ಚುಮೆಚ್ಚಿನ
ಮುದ್ರಣ ಕಲಸಕ್ಕೆ
"ಕೊಡಗು"
ಪ್ರೆಸ್ಸು.
ಮಡಿಕೇರಿ.

ಹೆಚ್ಚಿನ ವಿಷಯಕ್ಕೆ
ಕೂಡಲೆ ವಿಚಾರಿಸಿರಿ.

ಸಕ್ಕೇಸ ಭೂತದಯಯೆಣಾ ವಿದಾ, ವೀತಿ ಪ್ರಯತ್ನಕಾಃ॥ ಐಕ್ಯಮತ್ಯೇಸ ಜೇಶಾಸಾಂ ಸುಸಿರಾ ರಾಜ್ಯ ಸಂಪದಾ

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩–೮–೦.

ಸಂಪಾದಕ—ಸಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೨೮—೨—೧೯೩೬ [ಸಂಚಿಕೆ ೫೨

Telephon;
3145.

By Appointment
To H. E. The Governor of Madras.

Telegrams:
'PRECIOUS.'




V. SUBRAMANIA IYER.
Jeweller, & Diamond Merchant,
52–14 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.
Catalogue & special designs with quotations (free) on enqu ry

1906 ರಲ್ಲಿ ಸ್ಥಾಪಿತವಾದದ್ದು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಷನ್ ಉಡುಪಿ—ಲಿಮಿಟೆಡ್.
(ಬ್ರಿಟಿಷ್ ಇಂಡಿಯದಲ್ಲಿ ರಜಿಸ್ಟರ್ ಆದದ್ದು.)

ಹೆಡ್ ಆಫೀಸು—ಉಡುಪಿ
ಶಾಖೆಗಳು.
(1) ಉಡುಪಿ
(2) ಕುಂದಾಪುರ
(3) ಮಂಗಳೂರು—ರಥಬೀದಿ
(4) ಮಂಗಳೂರು—ಒಂದರ್
(5) ಮದರಾಸು
(6) ಶಿವಮೊಗ್ಗಾ
(7) ಮಡಿಕೇರಿ
(8) ವೀರರಾಜೇಂದ್ರಪೇಟೆ
ಬೇಂಕರರು.
(1) ಬೊಂಬಾಯಿ
(2) ಕಲ್ಕತ್ತಾ
(3) ಕರಾಚಿ
(4) ಕೊಚ್ಚಿನ್
(5) ಮೈಸೂರು
(6) ಬೆಂಗಳೂರು ಇತ್ಯಾದಿ ಸ್ಥಳಗಳಲ್ಲಿ

ನಿಮ್ಮ ಸೇವೆಯೇ ನಮ್ಮ ಧ್ಯೇಯ.

ತಾ. 15–1–1936 ರಿಂದ ಚಿನ್ನಾಭರಣಗಳ ಮೇಲಣ ಸಾಲಗಳ ಬಡ್ಡಿಯ ದರವನ್ನು ಅತೀ ಕಡಿಮೆ ದರಕ್ಕೆ ಇಳಿಸಲಾಗಿದೆ.

ನಿಖು ಠೇವಣಾತಿಗಳನ್ನು ಶೇಕಡ 5ರ ವರೆಗಿನ ಬಡ್ಡಿಯಲ್ಲಿ ಈಗ ಸ್ವೀಕರಿಸಲಾಗುತ್ತದೆ.

ಚಾಲ್ತಿ, ಸೇವಿಂಗ್ಸ್‌ಬ್ಯಾಂಕ್, ಕ್ಯುಮಿಲೇಟಿವ್ ಠೇವಣಾತಿಗಳನ್ನು ಅತೀ ಲಾಭದಾಯಕವಾದ ಬಡ್ಡಿಯಲ್ಲಿ ತೆರೆಯೋಣಾಗುತ್ತವೆ.

ಅಲ್ಲದೆ

ಎಲ್ಲಾ ತರದ ಬ್ಯಾಂಕಿಂಗ್ ವಜಿವಾಟುಗಳು ನಡಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿ ನಮ್ಮ ಯಾವುದೇ ಆಫೀಸಿನಿಂದ ಪಡೆಯಬಹುದು.
52—15

ಜನರಲ್
ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.
(ಸ್ಥಾಪಿತವಾದದ್ದು 1937 ರಲ್ಲಿ)
ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.
ಬೊನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25‰
ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20‰
ಪಾಲಿಸಿಯ ಶರತ್ತುಗಳು ಅತೀ ಸುಲಭ
ಅಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ವಂಶಪಾರಂಪರ್ಯ ಕಮಿಶನ್ ದೊರೆಯುವಂತಿದೆ.
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಸಿ. ಡಿ. ಭಾಗವತ್, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್, ಅಥವಾ:—
ಎ ಎಸ್ ಎಸ್ ಅಯ್ಯಂಗಾರ್.
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರೋಡ್,
52—38 ಬೆಂಗಳೂರು

# ಕೊಡಗು ಕೌನ್ಸಿಲು ವಿಂಟಿಂಗು.

ತಾ. 24–2–1936

ಕೊಡಗು ನ್ಯಾಯವಿಧಾಯಕ ಸಭೆಯ ಬಡ್ಜೆಟ್ ವಿಂಟಿಂಗು ಕೌನ್ಸಿಲು ಹಾಲ್‌ನಲ್ಲಿ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ತಾ, 24–2–36 ನೇ ಸೋಮವಾರ 11 ಗಂಟೆಗೆ ಪ್ರಾರಂಭವಾಯಿತು. ಎಲ್ಲ ಸದಸ್ಯರುಗಳೂ ಹಾಜರಿದ್ದರು. 'ಸಾರ್ವಭೌಮ ಐದನೇ ಜಾರ್ಜ್ ಚಕ್ರವರ್ತಿಗಳ ನಿಧನದ ಬಗ್ಗೆ ಈ ಸಭೆಯು ಅತ್ಯಂತ ವ್ಯಸನವನ್ನು ವ್ಯಕ್ತಗೊಳಿಸುವದಕ್ಕಾಗಿ ತನ್ನ ಕಾರ್ಯಕ್ರಮಗಳನ್ನು ಮುಂದಿರಿಸುತ್ತದಲ್ಲದೆ ರಾಜಕುಟುಂಬದ ವ್ಯಸನದಲ್ಲಿ ಸಹಾನುತಾಪವನ್ನು ವ್ಯಕ್ತಗೊಳಿಸಿ ಈಗಿನ ಚಕ್ರವರ್ತಿಗಳಾದ ಎಂಟನೇ ಎಡ್ವರ್ಡ್ ಪ್ರಭುಗಳಲ್ಲಿ ತನ್ನ ರಾಜಭಕ್ತಿಯನ್ನೂ, ಕರ್ತವ್ಯದಕ್ಷತೆಯನ್ನೂ ವ್ಯಕ್ತಗೊಳಿಸುತ್ತದೆ' ಎಂಬ ಠರಾವನ್ನು ಕೊಡಗು ಕಮಿಷನರವರು ಸೂಚಿಸಿ ಒಂದು ಚಿಕ್ಕ ಭಾಷಣ ಮಾಡಿದರು, ಠರಾವಿಗೆ ಒತ್ತಾಸೆಯಾಗಿ ಅನೇಕ ಸದಸ್ಯರುಗಳು ಭಾಷಣ ಮಾಡಿ ಸ್ವರ್ಗಸ್ಥರಾದ ಚಕ್ರವರ್ತಿಗಳ ಗುಣಕಥನವನ್ನು ಮಾಡಿದರು. ಅದರಂತೆಯೇ ಕೌನ್ಸಿಲಿನ ಕಾರ್ಯಕ್ರಮವು ಅಪರಾಹ್ನ 2–15 ಕ್ಕೆ ಮುಂದಿರಿಸಲ್ಪಟ್ಟಿತು,

## ಅಪರಾಹ್ನ 2–15 ಕ್ಕೆ

ಮೆ, ಗಳಾದ ಪುಚ್ಚಿಮಾಡ ನಾಣಯ್ಯನವರು ಮತ್ತು ತಿರುವೆಂಗಡಂಪಿಳ್ಳೈಯವರು ಹಾಜರಿರಲಿಲ್ಲ,

I ಹೊಸ ಮೆಂಬರರಾದ ಮೆ. ಯಂ, ಯಸ್, ಹೆಚ್, ಥಾವ್ಸನ್‌ರವರು ರಾಜಭಕ್ತಿಯ ಪ್ರಮಾಣವನ್ನು ಮಾಡಿದರು,

II ಸದಸ್ಯರು ಈ ಮೊದಲೇ ಕಳುಹಿಸಿದ 38 ಪ್ರಶ್ನೆಗಳಿಗೆ ಉತ್ತರಗಳು ಕೊಡಲಾದವು,

III ಕಳೆದ ಕೌನ್ಸಿಲಿನಲ್ಲಿ ಪಾಸಾದ ಠರಾವುಗಳನ್ನು ಕುರಿತು ಚೀಫ್ ಕಮಿಷನರವರು ಪಾಸು ಮಾಡಿದ ಆರ್ಡರುಗಳನ್ನು ಕೌನ್ಸಿಲಿನ ಸೆಕ್ರೆಟರಿಗಳು ಮೇಜಿನ ಮೇಲಿಟ್ಟರು,

## 1936–37 ನೇ ವರ್ಷದ ಬಡ್ಜೆಟ್.

IV ಆ ಮೇಲೆ ಫೈನಾನ್ಸ್ ಮೆಂಬರರು 1936–37 ನೇ ವರ್ಷ ಬಡ್ಜೆಟ್ಟನ್ನು ಸಭೆಯ ಮುಂದಿಟ್ಟು ಈ ಪ್ರಕಾರ ಭಾಷಣವಿತ್ತರು,

ಅಧ್ಯಕ್ಷರೇ, ನಾನು ಕಳೆದ ವರ್ಷದ ಅಂದರೆ 1935–36 ನೇ ವರ್ಷದ ಬಡ್ಜೆಟ್ಟನ್ನೂ ಮತ್ತು 1936–37 ನೇ ವರ್ಷದ ಬಡ್ಜೆಟ್ಟನ್ನೂ ಕುರಿತು ಸಂಕ್ಷೇಪವಾಗಿ ಅವಲೋಕಿಸುವೆನು. ಮಾನ್ಯ ಸದಸ್ಯರುಗಳನೇಕರು ಬಡ್ಜೆಟ್ಟನ್ನು ಕುರಿತು ತೀಕಿಸಲಿರುವರಾದ್ದರಿಂದ ಅಧಿಕ ಸಮಯ ತೆಗೆಯದೆ ಬಹಳ ಸಂಕ್ಷೇಪವಾಗಿ ನನ್ನ ಭಾಷಣವನ್ನು ಮುಗಿಸಲಿರುವೆನು.

ಕೊಡಗಿಗೆ ಕೌನ್ಸಿಲು ದೊರೆತ ಸಮಯದಲ್ಲಿ ಕೊಡಗಿನ ಬಡ್ಜೆಟ್ಟಿನಲ್ಲಿ 6 ಲಕ್ಷ ರೂಪಾಯಿ ಉಳಿತಾಯವಿತ್ತು. ಆದರೆ 1937 ಮಾರ್ಚಿ ಅಖೈರು ವರೆಗೆ ನಮಗೆ 10 ಲಕ್ಷ ರೂಪಾಯಿಯ 'ಕೊರತೆಯೆ' ಸಂಭವಿಸುವದು. ಅಂದರೆ 13 ವರ್ಷಗಳಲ್ಲಿ ಸುಮಾರು 16 ಲಕ್ಷದಷ್ಟು ಹೆಚ್ಚು ಖರ್ಚಾಗಿರುತ್ತೆ. ಪ್ರಪಂಚದ ವಿದ್ಯಮಾನಗಳು ಈ ವೆಚ್ಚಕ್ಕೆ ಕೆಲ ಮಟ್ಟಿಗೆ ಕಾರಣಭೂತವಾಗಿರುವದು. ಆದರೆ ಈ ಮೊದಲು ಅನುಸರಿಲ್ಪಟ್ಟ ವಿಶೇಷ ಯದ ಧೋರಣೆಯು ಕೈಗಾರಿಕೆಯ ದೇಶಗಳಿಗೆ ಒಪ್ಪುವಂಥಾದ್ದಲ್ಲದೆ ಕೇವಲ ಕೃಷಿಯ ದೇಶವಾದ ಕೊಡಗಿಗೆ ಒಪ್ಪುವಂಥಾದ್ದಲ್ಲ. ಇಂಥಾ ದೇಶದಲ್ಲಿ ನಾವು ಖರ್ಚು ಮಾಡದೆ ಉತ್ಪತ್ತಿಯು ಹೆಚ್ಚುವಂತಿಲ್ಲ.

1935–36 ನೇ ವರ್ಷದ ಬಡ್ಜೆಟ್ಟಿನಲ್ಲಿ 2,78,000 ರೂಪಾಯಿ ಪುನಃ ಅಜಮಾಯಿಸಿದ ಬಡ್ಜೆಟ್ಟಿನಲ್ಲಿ 3,17,000 ರೂಪಾಯಿ ಅಭಾವವೂ ಕಾಣಿಸಿದ್ದಾದರೂ ಈ ವರ್ಷದ ಅಂತ್ಯದಲ್ಲಿ ಅಂದಾಜು 2,85,000 ಯ ಅಭಾವವಿರುವದೆಂದು ಈಗ ಹೆಚ್ಚು ದೃಢವಾಗಿ ಹೇಳಬಹುದು. ಈ ವಿಷಯದಲ್ಲಿ ಸ್ವಲ್ಪ ವಿವರವಾದ ಅಂಕಗಳನ್ನು ಕೊಡುತ್ತೇನೆ. 5—ಭೂಕಂದಾಯದ ಉತ್ಪತ್ತಿಯಲ್ಲಿ ರೂ 4,200, ಈಗಿನ ಆರ್ಥಿಕ ದುಸ್ಥಿತಿಯಿಂದ, ಕಡಮೆಯಾಗಿದೆ. ಕಳೆದ ವರ್ಷ 15,000 ಗೆಲನು ಸಾರಾಯಕ್ಕೆ ಸುಂಕ ದೊರೆಯಿತಾದರೂ ವರ್ಷ ಬರೇ 14,000 ಗೆಲನುಗಳು ಮಾತ್ರ ಖರ್ಚಾಗುವದಾದ್ದರಿಂದ ರೂ 6,500 ಈ ಬಾಬಿನ ಉತ್ಪತ್ತಿಯಲ್ಲಿ ಕಡಮೆಯಾಗುವದು. ಫಾರೆಸ್ಟು ಉತ್ಪತ್ತಿಯಲ್ಲಿ ಬರೇ 3,02,100 ರೂ ಯ ಆಯವೆಂದು ಅಂದಾಜು ಮಾಡಲ್ಪಟ್ಟಿತ್ತಾದರೂ ನಮಗೆ ಇದಕ್ಕಿಂತ ಹೆಚ್ಚು ಆಯವಿರುವಂತೆ ತೋರುತ್ತೆ. ಯಾತಕ್ಕೆಂದರೆ ಗಂಧಕ್ಕೆ ಟನ್ನಿಗೆ ಬರೇ ರೂ 800 ಯಂತೆ ಜೆಲೆ ಹಿಡಿದಿದ್ದರೂ 79 ಟನ್ನುಗಳು ತಲಾ ರೂ 817 ರಂತೆಯೂ 71 ಟನ್ನುಗಳು ತಲಾ ರೂ 927 ರಂತೆಯೂ ಮಾರಾಟವಾದ್ದರಿಂದ ರೂ 5,800 ಹೆಚ್ಚು ಆದಾಯವಾಗಿದೆ. ಈ ಬಾಬಿನಲ್ಲಿ ಉತ್ಪತ್ತಿಯು ಹೆಚ್ಚು ತೃಪ್ತಿಕರವಾಗಿದೆ.

ಖರ್ಚಿನಲ್ಲಿ ಕೆಲವು ಅಂಶಗಳನ್ನು ಕುರಿತು ಹೇಳಬೇಕಾಗಿದೆ. ರವಿನ್ಯೂ ಬಾಬಿನಲ್ಲಿ ರೂ 2,860 ಅಂದರೆ ಒಡ್ಡಿಟ್ಟಿನಲ್ಲಿ ಪ್ರಿಂಟಾದ ಅಂದಾಜಿಗಿಂತಲೂ ರೂ 560 ಹೆಚ್ಚು ಖರ್ಚಾಗಿದೆ. ಇದಕ್ಕೆ ನೇಡಿ ಫೀಸು ಉದ್ಯೋಗಸ್ಥರನ್ನು ವರ್ಗ ಮಾಡಿದ್ದೂ ಡಪ್ಯುಟಿ ಡೈರೆಕ್ಟರು ಮಾರ್ಕೆಂಟಿಂಗ್ ಸಂಬಂಧ ಅನೇಕ ಕಡೆಗಳಿಗೆ ಪ್ರಯಾಣ ಬೆಳೆಸಿದುದರ ಭತ್ಯವೂ ಮತ್ತು ರಾಜಾ ಸಂಬಳಗಳೂ ಕಾರಣವಾಗಿವೆ. 22—ಔಷಧಿಕ ವಿಭಾಗದಲ್ಲಿ ರೂ 14,900 ಎಂದು ಅಂದಾಜು ಮಾಡಿದ್ದಲ್ಲಿ ರೂ 17,400 ಹೆಚ್ಚು ಖರ್ಚಾಗಿದೆ. ಇದರಲ್ಲಿ ರೂ 13,600 ಮೆಡೀಕ್ ಇನರ್‌ರವರಿಗೆ ರಜಾ ಸಂಬಳವಾಗಿಯೂ, ಬಾಕಿ ಉದ್ಯೋಗಸ್ಥರ ವರ್ಗಾವರ್ಗಿ ಮತ್ತು ರಜಾ ಸಂಬಳಕ್ಕಾಗಿಯೂ ಖರ್ಚಾಗಿರುವದಾಗಿದೆ. 24—ನ್ಯಾಯ ವಿಚಾರಣಾ ವಿಭಾಗದಲ್ಲಿ ನಿವೃತ್ತಿ ಹೊಂದಿದ ಸಬ್ ಮೇಜಿಸ್ಟ್ರೇಟರಾದ ಮೆ ಕಾಳಪ್ಪನವರಿಗೆ ರಜಾ ಸಂಬಳ ಕೊಟ್ಟ ಕಾರಣದಿಂದ ಹೆಚ್ಚು ಖರ್ಚಾಗಿದೆ. 32—ವೈದ್ಯ ಇಲಾಖೆಯಲ್ಲಿ ಉಳಿತಾಯ ಕಾಣಿಸಿದರ ಬದಲು ರೂ. 4,040 ಹೆಚ್ಚು ಖರ್ಚಾಗಿದೆ. ಇದು ಈಗಿನ ಸಿವಿಲ್ ಸರ್ಜನರ ವರ್ಗದಿಂದಲೂ, ಮದರಾಸು ಹಾಸ್ಪಿಟಲ್ ಆಸ್ಪತ್ರೆಗೆ ಕೊಡುವ ವಂತಿಗೆಯು ಏರಿದ್ದರಿಂದಲೂ ಇದು ಸಂಭವಿಸಿದ್ದಾಗಿದೆ. 33—ಪಬ್ಲಿಕ್ ಆರೋಗ್ಯದ ಬಾಬಿನಲ್ಲಿರೂ. 300 ಉಳಿತಾಯವಾಗುವುದರ ಬದಲು ರೂ. 1520 ಖರ್ಚು ಹೆಚ್ಚಾಗಿರುತ್ತೆ. ಇದು ಪ್ಲೇಗು ನಿವಾರಣೆ ಕಾರ್ಯಕ್ಕಾಗಿ ಹೆಚ್ಚಿದ್ದು. 41—ಸಿವಿಲ್ ವರ್ಕ್ಸ್‌ನಲ್ಲಿ ರೂ 5,500ರ ಬದಲು 7,100 ಖರ್ಚು ಆಗಿದೆ. ಇದು ರಜೆಯಲ್ಲಿರುವ ಸೆಕ್ಷನ್ ಆಫೀಸರ ಸಂಬಳಕ್ಕಾಗಿಯೂ ಮತ್ತು ಇನ್ನು ಕೆಲವು ಕಾರಣಗಳಿಂದಾಗಿದೆ. 45-A ಬಾಬಿನಲ್ಲಿ ರೂ. 8,760 ಹೆಚ್ಚಾಗಿದೆ. ಇದು ಮೆ. ಬ್ರಿಗ್‌ಸ್ಟಾಕ್‌ರವರ ಪಿಂಚಿನಿನ ಒಂದಂಶವನ್ನು ಒಂದೇ ಬಾರಿ ಕೊಟ್ಟದ್ದರ ಕಾರಣದಿಂದಾಗಿದೆ. 26—ಪೊಲೀಸು, 34—ವ್ಯವಸಾಯ ಖಾತೆ, 45—ಪಿಂಚಿನು ಮುಂತಾದವುಗಳಲ್ಲಿ ಸ್ವಲ್ಪ ಉಳಿತಾಯವಾಗಬಹುದು. 8—ಫಾರೆಸ್ಟಿನಲ್ಲಿ 20,900 ಉಳಿತಾಯವಾಗಬಹುದೆಂದು ನಿರೀಕ್ಷಿಸಲಾಗಿದೆ. ಹಾಗೂ ಒಟ್ಟಿನಲ್ಲಿ, 1935–36ನೇ ವರ್ಷದಲ್ಲಿ ರೂ. 10 82.000 ಆದಾಯವೂ, ರೂ. 13 67,000 ಖರ್ಚೂ ಆಗುವುದರಿಂದ ರೂ. 2,85,000 ವೆಚ್ಚ ಹೆಚ್ಚಾಗುವುದು.

ಇನ್ನು 1936–37ನೇ ವರ್ಷದ ಬಡ್ಜೆಟ್ಟನ್ನು ಕುರಿತು ಕೆಲವು ವಾಕ್ಯಗಳನ್ನಾಡುವೆನು. ಮುಂದಿನ ವರ್ಷದಲ್ಲಿ ರೂ. 3,36,000 ಖರ್ಚು ಹೆಚ್ಚಾಗುವದು. ಇದು ನಿಜವಾದ ಅಂಕೆಯೊಂದು ಒಪ್ಪಲಾಗುವುದಿಲ್ಲ. ಯಾತಕ್ಕೆಂದರೆ ಕೆಲವು ಕಾರಣಗಳಿಂದ ಒಟ್ಟಿನಲ್ಲಿ ನಿಜವಾದ ಸಂಖ್ಯೆಯು ಇದಕ್ಕಿಂತ ಕಡಮೆಯಾಗುವದೆಂದು ಊಹಿಸಬೇಕಾಗಿದೆ. ಇವುಗಳಲ್ಲಿ ಭೂಕಂದಾಯದಿಂದ ರೂ. 3,29,900 ಆದಾಯವಾಗುವದೆಂದು ಅಂದಾಜು ಮಾಡಲ್ಪಟ್ಟಿದೆ. ಇದು ಕಳೆದ ವರ್ಷದ ಆದಾಯದ ಆಧಾರದ ಮೇಲೆ ಅಂದಾಜು ಮಾಡಲ್ಪಟ್ಟಿದೆ. ರಿಮಿಶನ್ ಮತ್ತು ಸಸ್ಪೆನ್ಷನುಗಳಿಂದ ಇದು ಇನ್ನೂ ಕಡಮೆಯಾಗಬಹುದು. ಈ ವರ್ಷವೂ ಕಂದಾಯದಲ್ಲಿ ಕೆಲವು ಅಂಶವನ್ನು ವಸೂಲು ಮಾಡದೆ ಬಾಕಿಮಾಡಬೇಕೆಂದಿರುವದರಿಂದ ನಿಜವಾದ ಸಂಖ್ಯೆ ಎಷ್ಟಾಗಬಹುದೆಂದು ದೃಢವಾಗಿ ಹೇಳಲಾಗುವುದಿಲ್ಲ. ಎಕ್ಸೈಸ್ ಅಂದರೆ ಮಾದಕ ಪದಾರ್ಥಗಳ ಮಾರಾಟದ ಬಾಬಿನಲ್ಲಿ ರೂ. 2,26 100 ಆದಾಯವೆಂದು ಅಂದಾಜು ಮಾಡಲ್ಪಟ್ಟರೂ ಈ ವರ್ಷದ ಸರಾಯಿ ಅಂಗಡಿಗಳ ಮಾರಾಟದಿಂದ ರೂ. 1,500 ನಷ್ಟವಾಗಿದಲ್ಲದೆ 14,000 ಗೆಲನು ಸಾರಾಯಿ ಮಾರಾಟವಾಗುವ ಸಂಭವವಿರುವುದರಿಂದಈ ಬಾಬಿನಲ್ಲಿ ಇನ್ನೂ ರೂ. 8,000 ಕಡಮೆಯಾಗಬಹುದು,

ಫಾರೆಸ್ಟು ಉತ್ಪತ್ತಿಯಲ್ಲಿ ಕಡಮೆಯೇ ಅಂದಾಜು ಮಾಡಬೇಕಾಗಿದೆ. ಯಾತಕ್ಕೆಂದರೆ ಈ ವರ್ಷ 150 ಟನ್ನು ಗಂಧ ಮಾರಾಟವಾಯಿತು. ಮುಂದಿನ ವರ್ಷ 140 ಟನ್ನು ಮಾತ್ರ ದೊರೆಯುವದಾದ್ದರಿಂದ ಉತ್ಪತ್ತಿ ಕಡಮೆಯಾಗಬಹುದು.

ಮೋಟಾರು ಟ್ಯಾಕ್ಸ್ ಹೆಚ್ಚು ಕಡಮೆಯಾಗದ ಆದಾಯವಾಗಿರುವದರಿಂದ ಈ ವರ್ಷವೂ ಕಳೆದ ವರ್ಷದಷ್ಟೇ ಆಗಬಹುದೆಂದು ನಿರೀಕ್ಷಿಸಬೇಕಾಗಿದೆ.

ಮುಂದಿನ ವರ್ಷದ ಖರ್ಚನ್ನು ಕುರಿತು ಈಗಲೇ ಹೆಚ್ಚು ಹೇಳಲಾಗುವುದಿಲ್ಲ. ಆದರೂ ಕೆಲವು ಅಂಶಗಳನ್ನು ವಿವರಿಸುವೆನು. ಮುಂದಿನ ವರ್ಷದಲ್ಲಿ ದುಬಾರಿ ಫಾರೆಸ್ಟಿನಲ್ಲಿ ಕಾಡು ಪ್ರಾಣಿಗಳ ಮೇಲ್ವಿಚಾರಣೆಗಾಗಿ ಒಬ್ಬ ಫಾರೆಸ್ಟರನು ಮತ್ತು ಮೂರು ಗಾರ್ಡುಗಳನ್ನು ಹೆಚ್ಚಿಗೆ ನೇಮಿಸಲು ವಿಚಾರ ಮಾಡಾಗಿದೆ. ಇದಕ್ಕಾಗಿ ರೂ. 1000 ಹೆಚ್ಚು ಖರ್ಚು ಕಾಣಿಸಲಾಗಿದೆ, ಅಲ್ಲದೆ ಮಡಿಕೇರಿಯಲ್ಲಿ ಒಬ್ಬ ಮುನ್ಸೀಫರ ಹುದ್ದೇಯನ್ನು ಸ್ಥಾಪಿಸಲ್ಪಟ್ಟಿರುತ್ತೆ. ಬೆಂಗಳೂರು ಪೊಲೀಸು ಕಮಿಷನರವರ ಸಿಫಾರಸ್ಸಿನ ಮೇರೆ ಒಬ್ಬ ಸಬ್ ಇನ್ಸ್‌ಪೆಕ್ಟರರ ಮತ್ತು ಡಿಸ್ಪ್ಯಾಕ್ಟ್ ಸುಪರಿಂಟೆಂಡೆಂಟರ ಆಫೀಸಿನಲ್ಲಿ ಒಬ್ಬ ಕ್ಲಾರ್ಕರ ಹುದ್ದೆಯನ್ನೂ, ವಿರಾಜಪೇಟೆ ಆಸ್ಪತ್ರೆಗೆ ಒಬ್ಬ ನರ್ಸನನ್ನೂ, ನಾಪೋಕ್ಲು ಆಸ್ಪತ್ರೆಗೆ ಒಬ್ಬ ಕಂಪೌಂಡರನ್ನೂ, ಮೆ. ಗಿರಿಯಪ್ಪನವರ ಸಿಫಾರಸ್ಸಿನ ಪ್ರಕಾರ 2 ಕೋ-ಆಪರೇಟಿವ್ ಇನ್ಸ್‌ಪೆಕ್ಟರುಗಳನ್ನೂ ಮತ್ತು ರಿಜಿಸ್ಟ್ರಾರರ ಆಫೀಸಿಗೆ ಒಬ್ಬ ಕ್ಲಾರ್ಕರನ್ನೂ ನೇಮಿಸುವ ವಿಚಾರ ಮಾಡಾಗಿದೆ. ಈ ಹೊಸ ಹುದ್ದೇಗಳಿಗಾಗಿ ಖರ್ಚು ಹೆಚ್ಚುವುದಲ್ಲದೆ ಬೇರೆ ಬಾಬುಗಳು ಯಾವುವೆಂದರೆ—ರೂ. 2000 ಮಡಿಕೇರಿ ಮತ್ತು ವಿರಾಜಪೇಟೆ ಆಸ್ಪತ್ರೆಗಳಲ್ಲಿ ಕ್ವಿನೀನು ಸಪ್ಲೈ ಮಾಡಲೂ, ಮಡಿಕೇರಿ ಆಸ್ಪತ್ರೆಗೆ ಹೊಸ ಮಂಚಗಳನ್ನು ಕೊಂಡುಕೊಳ್ಳಲಿಕ್ಕೆ ರೂ. 1300 ಯೂ ಖರ್ಚಿನಲ್ಲಿ ಕಾಣಿಸಿರುವದಾಗಿದೆ. ರೂ. 5000 ವಿರಾಜಪೇಟೆ ಟೌನಿಗೆ ನೀರು ಸರಬರಾಯಿ ಮಾಡುವುದಕ್ಕಾಗಿಟ್ಟಿರುವದಾಗಿದೆ, ಈ ವಿಷಯದಲ್ಲಿ ಮೈಸೂರಿನ ಗರುಡಾಚಾರ್‌ರವರು ಬಂದು ಪಾವಿಗಳ ಮೂಲಕ ನೀರು ಸರಬರಾಯಿಯಾಗುವದೆಂದು ಅಭಿಪ್ರಾಯ ಪಟ್ಟದ್ದರಿಂದ ಆ ಕೆಲಸವನ್ನು ಈ ವರ್ಷದಲ್ಲಿ ಬೇಗನೆ ಕೈಕೊಳ್ಳಲಾಗುವುದು,

ರೂ, 500 ವೆಟರಿನರಿ ಆಸ್ಪತ್ರೆಗಳಿಗೆ ಒಂದು ಸೂಕ್ಷ್ಮದರ್ಶಕ ಯಂತ್ರ (ಮೈಕ್ರಾಸ್ಕೋಪ್) ವನ್ನು ಕೊಂಡುಕೊಳ್ಳಲಿಕ್ಕಾಗಿ ಇಡಲಾಗಿದೆ. ಸುಪರ್‌ವಿಜನ್ ಫಂಡಿಗೆ ರೂ. 3,400 ಇಡಲಾಗಿದೆ ಡಿ. ಬೋರ್ಡಿಗೆ ಕೊಡಲ್ಪಡುವ ಗ್ರಾಂಟಿನಲ್ಲಿ ರೂ, 2,000 ಹೆಚ್ಚಿಸಲಾಗಿದೆ, ಇದಲ್ಲದೆ ಅನೇಕ ಸೇತುವೆಗಳ ರಿಪೇರಿಗಾಗಿ ಹಣ ಇಡಲಾಗಿದೆ, ರೂ, 2,000 ಚೆನ್ನಂಗಿ ಕಟ್ಟೆಗಾಗಿ ಇಡಲ್ಪಟ್ಟಿದೆ, ಈ ಬಾಬಿನಲ್ಲಿ ಈ ನೊತ್ಮವು ಸಾಕಾಗಲಾರದು, ಇಂಡಿಯಾ ಸರ್ಕಾರದಿಂದ ಸಹಾಯವನ್ನು ಪಡೆಯಲು ಪ್ರಯತ್ನಿಸುತ್ತಿದ್ದೇವೆ, ಅಲ್ಲಿನ ಸಹಾಯವೆಷ್ಟೆಂದು ತಿಳಿಯದೆ ನಮ್ಮ ಸರ್ಕಾರದಿಂದ ಎಷ್ಟು ಖರ್ಚಾಗುವದೆಂಬದು ಈಗಲೇ ಹೇಳಲಾಗುವದಿಲ್ಲ, ರೂ, 1,500 ಮಡಿಕೇರಿ ಪೊಲೀಸು ಟ್ರೈನಿಂಗ್ ಸ್ಕೂಲಿಗೆ ಬಾವಿ ತೋಡಲು ಇಡಲಾಗಿದೆ, ರೂ 800 ಸೋಮವಾರಪೇಟೆ ವೆಟರಿನರಿ ಆಸ್ಪತ್ರೆಗೆ ಒಂದು ಆಪರೇಶನ್ ಥೀಯೇಟರ್ ಕಟ್ಟಲು ಇಡಲಾಗಿದೆ,

1936–37 ನೇ ವರ್ಷದ ಅಂದಾಜು ಆದಾಯ ವೆಚ್ಚಗಳ ವಿಷಯ ಸಂಕ್ಷೇಪವಿವರಣೆಯನ್ನು ಕೊಟ್ಟದ್ದಾಯಿತು, ಈ ಅಂದಾಜು ಬಡ್ಜೆಟ್ಟಿನ ಪ್ರಕಾರ ಕೇವಲ ಆಡಳಿತವನ್ನು ನಿರ್ವಹಿಸಲು 3 ಲಕ್ಷ ರೂ, ಗಳ ಅಭಾವವು ಕಂಡು ಬರುತ್ತದೆ, ಅಭಿವೃದ್ಧಿಯ ಕಾರ್ಯಗಳಿಗಾಗಿ ಅತ್ಯಲ್ಪ ಸಂಖ್ಯೆಯನ್ನು ಇಟ್ಟಿರುವೆವಾದರೂ ನಿಜವಾದ ಅಭಿವೃದ್ಧಿಯ ಕಾರ್ಯಗಳಿಗೆ ಹಣವಿಲ್ಲ. ಇಂಡಿಯಾ ಸರಕಾರದ ಸಹಾಯವಿಲ್ಲದೆ ಕೊಡಗಿಗೆ ಈ ದಾರಿಯಲ್ಲಿ ಪ್ರತ್ಯೇಕವಾಗಿರಲು ಅಸಾಧ್ಯವಾಗಿ ಕಂಡು ಬರುತ್ತೆ. ಕೊಡಗು ಪ್ರಾಂತವು ತನ್ನ ಸ್ಥಿತಿಯನ್ನುಳಿಸಿಕೊಂಡು ಸ್ವಲ್ಪ ಅಭಿವೃದ್ಧಿಗೊಳ್ಳಲು ಇಂಡಿಯಾ ಸರಕಾರದಿಂದ ಸಹಾಯವನ್ನಪೇಕ್ಷಿಸುತ್ತದೆ, ಇದು ಬಹಳ ವಿಪರೀತವಾದ ಬೇಡಿಕೆಯಲ್ಲ, ಇದರಲ್ಲಿ ನ್ಯಾಯವಿದೆ'

## (2) ಬಡ್ಜೆಟ್ಟಿನ ಮೇಲೆ ಚರ್ಚೆ.

ರಾ. ಸಾ. ಶ್ರೀಪತಿರಾಯರು—1936–37ನೇ ವರ್ಷದ ಬಡ್ಜೆಟನ್ನೂ ಮತ್ತು ಫೈನಾನ್ಸ್ ಮೆಂಬರರ ಭಾಷಣವನ್ನೂ ಕೇಳಿದ್ದಾಯಿತು. ಬಡ್ಜೆಟ್ಟಿನ ವಿಷಯದ ಅನೇಕ ಮುಖ್ಯ ವಿಷಯಗಳನ್ನು ಫೈನಾನ್ಸ್ ಮೆಂಬರರೇ ಚೆನ್ನಾಗಿ ಪೃಥಕ್ಕರಿಸಿರುವರು. ಇದರಲ್ಲಿ ಆರ್ಥಿಕ ದುಸ್ಥಿತಿಯೇ ಮುಖ್ಯವಾಗಿ ತೋರಿಬರುವದಾಗಿದೆ. ಈ ಸಂಬಂಧವಾಗಿ ಸ್ಥಳೀಯ ಸರಕಾರದವರಿಂದ ನಿಯಮಿತವಾದ 'ಎಕನಾಮಿಕ್ ಕಮಿಟಿ' ಯವರು ಚೆನ್ನಾಗಿ ಶೋಧೆ ನಡೆಸಿರುವರು. ಇವರ ವರದಿ ಮತ್ತು ಸಿಫಾರಸ್ಸುಗಳನ್ನು ಕುರಿತು ಸರ್ಕಾರದವರು ಎಷ್ಟರ ಮಟ್ಟಿಗೆ ಕಾರ್ಯಾರಂಭ ಮಾಡಿರುವರೆಂದು ತಿಳಿಯಬಂದಿರುವದಿಲ್ಲ. ನಾವು ಕೆಲವು ವರ್ಷಗಳಿಂದ ಒಳ್ಳೇ ದಿನಗಳು ಬರುವವೆಂಬ ನಿರೀಕ್ಷಣೆಯಲ್ಲಿರುವೆವು. ಆದರೆ ವರ್ಷ ವರ್ಷ ಸ್ಥಿತಿಯು ಮೊದಲಿನದಕ್ಕಿಂತ ಕಡುತ್ಕಲಿದೆ. ಈ ವಿಚಾರವಾಗಿ ಅನೇಕ ಉತ್ತಮ ಅಭಿಪ್ರಾಯಗಳನ್ನು ಪಡೆದದ್ದಾಯಿತು. ಆದರೂ ಸ್ಥಿತಿಯು ಉತ್ತಮಗೊಂಡಿರುವದಿಲ್ಲ. ಕಾಫಿಗೆ ಬೆಲೆಯಿಲ್ಲ, ಭತ್ತದ ಫಸಲು ಕಡಮೆಯಾಗಿದೆ. ಈ ವಿಷಯದಲ್ಲಿ ಇಂಡಿಯಾ ಸರ್ಕಾರದವರು ಸಹಾಯವನ್ನೀಡಬೇಕೆಂದು ಫೈನಾನ್ಸ್ ಮೆಂಬರರೇ ವ್ಯಕ್ತಗೊಳಿಸಿರುವರು. ಯಾಲಕ್ಕಿಯ ಬೆಲೆಯೂ, ಫಸಲೂ ಸಹ ಬಹಳ ಕಡಮೆಯಾಗಿರುತ್ತದೆ. ಯಾಲಕ್ಕಿ ಬೆಲೆಯು ಈಗ ಏರಿರುವದರಿಂದ ಯಾಲಕ್ಕಿ ವ್ಯವಸಾಯಗಾರರ ಸ್ಥಿತಿಯು ಉತ್ತಮವಾಗಿದೆಯೆಂದು ಭಾವಿಸಲಾಗದು. ಕಿತ್ತಳೆ ಫಸಲೂ ಸಹ ಬಹಳ ಕಡಿಮೆ. ಈ ಕಾರಣಗಳು ದೇಶದ ನಿಜ ಸ್ಥಿತಿಯನ್ನು ವಿಷಧಗೊಳಿಸುತ್ತವೆ ಇಕನಾಮಿಕ್ ಕಮಿಟಿಯವರು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿರುವರು. ಅದರಲ್ಲಿ ಲೇಂಡ್ ಮಾರ್ಗೇಜ್ ಬ್ಯಾಂಕನ್ನು ಸ್ಥಾಪಿಸುವುದು ಮುಖ್ಯವಾದದ್ದಾಗಿದೆ. ಹಾಗೆ ಸ್ಥಾಪಿಸಲ್ಪಡುವ ಬ್ಯಾಂಕಿನ ಕಾರ್ಯ ಕಲಾಪವ ನಿರ್ದಿಷ್ಟ ಧೋರಣೆಯನ್ನು ಈಗಲೇ ಗೊತ್ತುಹಚ್ಚಬೇಕು. ಸರ್ಕಾರದವರು ಹೆಚ್ಚು ಶೇರುಗಳನ್ನು ತೆಗೆದುಕೊಂಡು ಡಿಬೆಂಚರುಗಳಿಗೆ ಖಾತರಿ ಕೊಡಬೇಕು ಸುಲಭ ಶರತ್ತುಗಳ ಮೇಲೆ ದೀರ್ಘ ಕಂತಿನ ಸಾಲಗಳು ರೈತನಿಗೆ ದೊರೆಯುವಂತಾಗಬೇಕು

ವ್ಯವಸಾಯ ಇಲಾಖೆಯು ಇರುವದಾದರೂ ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಮ್ಮ ದೇಶದ ಮುಂಗಾರಿನ ಸತ್ವವು ಈಗ ಬಹಳ ಕಡಿಮೆಯಾಗಿದೆ. ರೈತನಾಗಿರುವ ನನಗೆ ಇದು ಅನುಭವದ ವಿಷಯವಾಗಿದೆ ಈ ವಿಷಯದಲ್ಲಿ ಸರಕಾರದವರು ಕಾಲವಿಳಂಬವಿಲ್ಲದೆ ಸಾಧ್ಯವಾದ ಮಟ್ಟಿಗೆ ರೈತನ ಸಹಾಯಕ್ಕೆ ಬಾರಬೇಕು. ದನಗಳ ತಳಿಯೂ ಸಹ ಕೆಟ್ಟು ಹೋಗಿರುತ್ತೆ, ದನಕರುಗಳು ದಿನೇ ದಿನೇ ಅಲ್ಪ ಗಾತ್ರದ ವುಗಳಾಗುತ್ತಾ ಕೆಲಸಕ್ಕೆ ಬಾರದವುಗಳಾಗಿ ರೈತನ ವ್ಯವಸಾಯಕ್ಕೆ ಕಷ್ಟವಾಗಿರುತ್ತೆ, ನನ್ನ ನಾಡಿನ ಕಡೆ ದನಗಳು ಬಹು ಅಲ್ಪ ಗಾತ್ರದವುಗಳಾಗಿವೆ, ತಳಿಯನ್ನು ಉತ್ತಮಗೊಳಿಸುವ ವಿಷಯವನ್ನು ಸರ್ಕಾರದವರು ಲಕ್ಷ್ಯದಲ್ಲಿಡಬೇಕು. ಅಲ್ಲದೆ ಅಂತಾನ ನಿರ್ಮೂಲ ಮಾಡುವ

ಯಲು ಸ್ಥಳಗಳ ಏರ್ಪಾಡಾಗಬೇಕು. ಅಲ್ಲದೆ ಇಲ್ಲಿಯ ಉತ್ಪತ್ತಿಗಳನ್ನು ಬೇರೆ ಕಡೆಗಳಿಗೆ ಒಳ್ಳೇ ಬೆಲೆಗೆ ರವಾನೆ ಮಾಡುವ ವ್ಯವಸ್ಥೆ ಮಾಡಬೇಕು

12 ವರ್ಷಗಳಲ್ಲಿ ನಾವು ಅಂದಾಜು 18 ಲಕ್ಷ ರೂಪಾಯಿ ಸ್ವಾಹ ಮಾಡಿರುವೆವು. 1930 ರಿಂದ ನಾವು ಸಾಲ ತೆಗೆಯಲು ಅಪೇಕ್ಷಿಸಿರುವೆವು. ಈಗ ಉತ್ಪತ್ತಿಯ $\frac{1}{3}$ ರಷ್ಟು ಅಭಾವವಿದೆ. ಒಂದೇ ಆಡಳಿತಕ್ಕೆ ಸಾಲ ಮಾಡುವಾಗ ವ್ಯವಸಾಯದ ಅಭಿವೃದ್ಧಿಗಾಗಿ 2 ಲಕ್ಷ ರೂಪಾಯಿ ಯಾತಕ್ಕೆ ಹೆಚ್ಚು ಪಡೆಯಬಾರದು, ವರ್ಷಕ್ಕೆ 7 ಲಕ್ಷ ರೂಪಾಯಿಯ ವಾರ್ಷಿಕ ವಂತಿಗೆ ದೊರೆತರೇನೇ ನಮ್ಮ ಸ್ಥಿತಿಯು ಸುಧಾರಿಸುವುದು. ನಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದೇ ಮುಖ್ಯ ವಿಚಾರ. ಅದಕ್ಕೆ ಸರ್ಕಾರದವರು ಗಮನವೀಯಬೇಕು.

ರಾ. ಸಾ. ಪಾಂಡಂಡ ಚಂಗಪ್ಪನವರು—'ವರ್ಷ ವರ್ಷ ಹಣದ ಅಭಾವವು ಹೆಚ್ಚುತ್ತಿದೆ. ನಮ್ಮ ಸ್ಥಿತಿಯು ಮುಂದಕ್ಕೇನಾಗುವದೆಂಬುದು ಊಹಿಸಲಸಾಧ್ಯವಾಗಿದೆ. ಸರ್ ಓಟೊ ನೆಮಿಯರ್‌ರವರ ನೇತೃತ್ವದಲ್ಲಿ ಜರುಗಲಿರುವ ಪ್ಯಾಂತ್ಯಗಳ ಆರ್ಥಿಕ ಪರಿಶೋಧನೆಗೆ ನಮ್ಮ ವಿಚಾರವನ್ನೂ ಸಹ ಮುಟ್ಟುವಂತೆ ಮಾಡಬೇಕು. ಸರ್ಕಾರವು ಈ ವಿಚಾರದಲ್ಲಿ ಸಾಕಷ್ಟು ತಿಳುವಳಿಕೆ ಕೊಡಬೇಕು. ದೇಶದ ಜನರ ಆರೋಗ್ಯವು ಉತ್ತಮವಾಗಿರುವದಿಲ್ಲ. ಮಡಿಕೇರಿಯಲ್ಲಿ ಪ್ಲೇಗು ತಿಂಗಳುಗಟ್ಟಲೆ ಇರುತ್ತದೆ. ರೋಗಿಗಳು ಚಿಕಿತ್ಸೆಗಾಗಿ ಹೊರ ಪ್ಯಾಂತ್ಯಗಳಿಗೆ ಹೋಗುವದು. ವಿದ್ಯಾ ಪ್ರಸಾರಣಕ್ಕೆ ಸಾಕಷ್ಟು ಉತ್ತೇಜನವಿಲ್ಲ. ಸರ್ಕಾರದವರು ಡಿ. ಬೋರ್ಡಿಗೆ ಕೊಡುವ ಗ್ರಾಂಟನ್ನು ಹೆಚ್ಚಿಸಬೇಕು. ನಮ್ಮ ದೇಶದ ಕೃಷಿಕರ ದೇಶ, ಆದರೆ ಬರೇ ಒಬ್ಬ ಡೆವೂನ್ಸ್‌ಟ್ರೇಟರಿರುವರು. ಫಸಲುಗಳೆಲ್ಲವೂ ಕಡೆಮೆಯಾಗಿದೆ. ಕಾಫಿ ಪ್ಲಾಂಟರುಗಳ ಸ್ಥಿತಿಯು ವರ್ಣನಾತೀತವಾಗಿದೆ. ಇವರಿಗೆ ಹಣ ಸಹಾಯವನ್ನು ಕೂಡಲೇ ಒದಗಿಸಬೇಕು. ಕೂಡಗಿಗೆ ರಿಯಾಯಿತಿಗಳು ಸ್ವಲ್ಪ ಮಾತ್ರ. ಬಡ್ಜೆಟ್ಟಿನಲ್ಲಿ ಈ ವಿಷಯ ಯಾವ ತರಹದ ಸೂಚನೆಯೂ ಕಾಣುವುದಿಲ್ಲ. ಸರ್ಕಾರದವರಂತೆ ಈ ವಿಷಯದಲ್ಲಿ ನಿರ್ಲಕ್ಷಿಸುವರಾಗಿ ತಿಳಿಯಬೇಕಾಗಿದೆ. ನೆರೆ ಪ್ರಾಂತಗಳು ಸುಧಾರಣೆಗಳನ್ನು ಅನುಭವಿಸುವಾಗ ನಾವು ಸುಮ್ಮನಿರಬೇಕಾಗುತ್ತೆ. ಇದರಿಂದ ಕೆಡುಕಾಗುವುದರಿಂದ ಸರ್ಕಾರವು ಒಡನೆ ಈ ವಿಷಯದಲ್ಲಿ ತಕ್ಕ ಶ್ರಮ ವಹಿಸಬೇಕು.'

ಮೆ, ನಡಿಕೇರಿಯಂಡ ಸೋಮಯ್ಯನವರು 'ಉತ್ಪತ್ತಿಯು ಎಲ್ಲಾ ಬಾಬುಗಳಲ್ಲಿಯೂ ಅದಾಯವು ಕಡಿಮೆಯಾಗಿದೆ. ಇಂಡಿಯಾ ಸರ್ಕಾರದ ಸಹಾಯವೂ ಕಾಣುವದಿಲ್ಲ. ಈ ವರ್ಷದ ಫಸಲುಗಳೆಲ್ಲ ಕಡಿಮೆಯಾಗಿದೆ, ಕಡಿಮೆ ಪಕ್ಷ 25% ರಷ್ಟು ಕಂದಾಯ ಮೂಫು ಕೊಡಬೇಕು. ಅಲ್ಲದೆ ಫಾರಂಸ್ಟು ಇಲಾಖೆಯಲ್ಲಿ ಒಬ್ಬ ಆಫೀಸರನ್ನು, ಪಿ, ಡಬ್ಲ್ಯು, ಡಿ, ಇಲಾಖೆಯಲ್ಲಿ ಒಬ್ಬ ಆಫೀಸರನ್ನು ಮಾತ್ರ ಇಟ್ಟುಕೊಳ್ಳಬೇಕು, ವೈದ್ಯ ಇಲಾಖೆಯಲ್ಲಿ ಐ, ಯಂ, ಯಸ್, ಆಫೀಸರು ಬೇಕಾಗಿಲ್ಲ. ಈಗಿನ ಆರ್ಥಿಕ ಹೀನ ಸ್ಥಿತಿಯ ದೃಷ್ಟಿಯಿಂದ ಈ ಸ್ವಕಾರ ಹೇಳಿದಾಗಿದೆ, ಅಲ್ಲದೆ ಮೈಸೂರಿನಲ್ಲೊಬ್ಬ ಮಲಬಾರಿನಲ್ಲೊಬ್ಬ ಮಾರ್ಕೆಟಿಂಗ್ ಆಫೀಸರುಗಳನ್ನು ನೇಮಿಸತಕ್ಕದ್ದು, ಕೂ, ಅ. ಇಲಾಖೆಯ ಸುಪರ್‌ವಿಜನಿಗಾಗಿ ರೂ, 3,400 ಮತ್ತು ವೀರಾಜಪೇಟೆ ನೀರಿನ ಯೋಜನೆಗಾಗಿ ರೂ, 5000 ಇಟ್ಟದ್ದು ಸ್ತುತ್ಯರ್ಹ, ಸಂಕಾರದವರು ಕಮಿಷನರುಗಳನ್ನು ಆಗಾಗ್ಗೆ ಬದಲಾಯಿಸುವದರ ಉದ್ದೇಶ ತಿಳಿಯಬರುವದಿಲ್ಲ, ಇದರಿಂದ ಬಹಳ ನಷ್ಟವಾಗುತ್ತದೆ.'

ಮೆ ಒಲ್ಲಚಂಡ ಬೆಳ್ಯಪ್ಪನವರು—ಸರಕಾರದ ಧೋರಣೆಯಲ್ಲಿ ಯಾವ ಏಧದ ಬದಲಾವಣೆಯೂ ಕಂಡು ಬರುವದಿಲ್ಲ. ನಾಗರೀಕರಾಗಿರುವ ಪ್ರಜೆಗಳಿಂದ ಕೂಡಿದ ಇಂಥಾ ಪ್ರಾಂತವನ್ನು ಇಂಡಿಯಾ ಸರಕಾರವು ನಿರ್ಲಕ್ಷಿಸಿರುವದು ವ್ಯಸನಕರ. ವ್ಯವಸಾಯದಲ್ಲಿ ಯಾವ ತರಹದ ನಷ್ಟದ ಸಂಪ್ರದಾಯಗಳು ಉಪದೇಶಿಸಲ್ಪಟ್ಟಲ್ಲ. ರೈತನು ಹಳೇ ನೇಗಿಲನ್ನೇ ಅವಲಂಬಿಸಬೇಕಾಗಿದೆ ಮಣ್ಣಿನ ಸತ್ವವನ್ನುಳಿಸುವ ಬಗ್ಗೆ ಏನೊಂದು ಪ್ರೋತ್ಸಾಹವೂ ಕಂಡು ಬರುವದಿಲ್ಲ ಬರೀ ಒಬ್ಬ ಡೆಮೊನ್‌ಸ್ಟ್ರೇಟರಿಗೆ ಸಂಬಳ ಕೊಡುವದರಿಂದ ವ್ಯವಸಾಯ ಇಲಾಖೆಯ ಕೆಲಸವು ಪೂರ್ತಿಗೊಳ್ಳಲಿಲ್ಲ. ದಿನಗಳು ಸಾಯುತ್ತಿರುವದು ರೈತರಿಗೆ ಬಹಳ ದೊಡ್ಡ ಕಷ್ಟ. ಇದಕ್ಕಾಗಿ ಹಿಜ್ಜು ವೆಟರನರಿ ಶಾಖೆಗಳನ್ನು ತೆಗೆಯಬೇಕಲ್ಲದೆ ಮಡಿಕೇರಿಯಲ್ಲಿ ಒಂದು ವೆಟರನರಿ ಆಸ್ಪತ್ರೆಯನ್ನು ತೆರೆಯಬೇಕು ಆಡಳಿತವನ್ನು ಸಾಗಿಸಲು ಸಾಲಮಾಡುತ್ತಿರುವದು ಎಂದೂ ಹಿತವಲ್ಲ. ನಮಗೆ ಒಳ್ಳೆ ಪ್ರಯೋಜನದ ವಾರ್ಷಿಕ ವಂತಿಗೆಯು ದೊರೆಯದಿದ್ದಲ್ಲಿ ಏಮೋಜನೆಯಲ್ಲ. ಈ ಪ್ರಕಾರವಾದರೂ ಏಕೀಕರಣವು ಅನಿವಾರ್ಯ. ಅದನ್ನಾದರೂ ಸರಕಾರವು ವ್ಯತ್ಯಾಗೊಳಿಸಬಾರದಿತ್ತು. ಕೂಡಗು ಪ್ರತ್ಯೇಕವಿರಬೇಕೇ ಯಾ ಪಕ್ಕದ ಪ್ರಾಂತಕ್ಕೆ ಸೇರಿಸಿಕೊಂದಿಗೆ ಏಕೀಭವಿಸಬೇಕೇ ಎಂಬುದು ಇನ್ನೂ ನಿಶ್ಚಯವಾಗಿರುವದಿಲ್ಲ. ಹೀಗೆ ಅನಿಶ್ಚಿತವಾಗಿ ಮುಂದುವರಿಯುವದರಿಂದ ಪ್ರಯೋಜನವಿಲ್ಲ.

ಪ್ಲಾಂಟರ ಸ್ಥಿತಿಯು ಶೋಚನೀಯಾವಸ್ಥೆಯಲ್ಲಿದೆ. ಇನ್ನು ಕೆಲವು ವರ್ಷಗಳಲ್ಲಿ ಕಾಫಿ ತೋಟಗಳೆಲ್ಲ ಬರೀ ಲಂಟಾನ ಪದರು ತುಂಬುವದರಲ್ಲಿ ಸಂಶಯವಿಲ್ಲ. ರೈತನ ಸಹಾಯಕ್ಕಾಗಿ ಭೂಮಿ ಗಿರ್ಹ್ ಬ್ಯಾಂಕನ್ನು ಸ್ಥಾಪಿಸಬೇಕು. ಇಂಡಿಯಾ ಸರ್ಕಾರದಿಂದ ಏಂತಿಗೆಯನ್ನು ಪಡೆದು ಗಂಧವನ್ನು ಸ್ಪೋರುಮಾಡಿ ಒಳ್ಳೆ ಬೆಲೆಗೆ ಮಾರಬೇಕು. ವಿದ್ಯಾ ಇಲಾಖೆಯಲ್ಲಿ ಹೆಚ್ಚಿನ ಅಭಿವೃದ್ಧಿ ಮಾಡಬೇಕು. 'ಕಾನ್ವೆಂಟಿನಲ್ಲಿ ಶೇಕಡ 100 ರಷ್ಟು ವಿದ್ಯಾರ್ಥಿನಿಯರು ಯಸ್. ಯಸ್. ಎಲ್. ಸಿ ಪರೀಕ್ಷೆಯಲ್ಲಿ ಪಾಸಾಗುವಾಗ್ಗೆ ಬಾಕಿ ಎಂಡು ಹೈಸ್ಕೂಲುಗಳಲ್ಲಿ ಒದೇ 50% ರಷ್ಟು ಪಾಸಾಗುವದಂ ಕಾರಣವೇನು? ಜುಡಿಶಿಯಲ್ ಮತ್ತು ಎಗ್ಸಿಕ್ಯುಟಿವ್ ಇಲಾಖೆಗಳನ್ನು ಬೇರ್ಪಡಿಸಲು ಇನ್ನೂ ಏರ್ಪಾಡು ಮಾಡಬೇಕು. ಪಬ್ಲಿಕ್ ಹೆಲ್ತ್, ಇಲಾಖೆಯನ್ನು ಜಾರಿಗೆ ತರುವ ಯೋಜನೆಯಲ್ಲಿರುವರೆಂದು ತಿಳಿಯಬರುತ್ತದೆ. ಅದರಲ್ಲಿ ಕೆಲಸ ಮಾಡುವ ಉದ್ಯೋಗಸ್ಥರ ಸಂಖ್ಯೆಯನ್ನು ಕಡಿಮೆಮಾಡಿ ಮೇಲ್ವಿಚಾರಕ ಉದ್ಯೋಗಸ್ಥರ ಸಂಖ್ಯೆಯನ್ನು ಹೆಚ್ಚಿಸುವರೆಂದು ತಿಳಿದುಬರುತ್ತೆ, ಈ ತರಹದ ಯೋಜನೆಯು ಖಂಡಿತ ಪ್ರಯೋಜನಕಾರಿಯಾಗಲಾರದು. ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರನ್ನು ನೇಮಿಸುವ ವಿಷಯದಲ್ಲಿ ಒಳ್ಳೆ ಅನುಭವಶಾಲಿಗಳಾಗಿ ತರಬೇತು ಹೊಂದಿದವರನ್ನೇ ನೇಮಿಸಬೇಕು ಮುಂದಿರಾಯು ಇಲಾಖೆಯನ್ನು ಕುರಿತು ಸರಕಾರದ ಉತ್ತರವು ಬಹಳ ಅತೃಪ್ತಿಕರ. ಸಂಕಲವು ಮನಸಿಟ್ಟಿದ್ದರೆ ಕೇಳಿದ ಪ್ರಶ್ನೆಗಳಿಗೆ ತಕ್ಕ ಉತ್ತರ ಪಡೆಯಬಹುದಾಗಿತ್ತು. ಸರಕಾರಿ ಗ್ಯಾರಂಟಿನ ಸಹಾಯದಿಂದ ನಡೆಯುವ ಈ ಸಂಸ್ಥೆಯ ವಿಷಯದಲ್ಲಿ ಪಬ್ಲಿಕಿನವರಂಗ ಅಂಕಿಕೆಯನ್ನು ಕೂಡಬೇಕು. ಕೆವಿಷನರುಗಳ ಬದಲಾವಣೆಯು ಆಗಾಗ್ಗೆ ಆಗುವದರಿಂದ ಈ ಪ್ರಾಂತಕ್ಕೆ ಬಹಳ ನಷ್ಟವಾಗುತ್ತದೆ ಸಬ್ ಜಡ್ಜರ ಹುದ್ದೆಗೆ ಬರೀ ಲಾಯರುಗಳ ಪೈಕಿ ಒಬ್ಬರನ್ನು ಆರಿಸುವದಿಂದ ಮುನಸೀಫರುಗಳಿಗೆ ಮುಂದಿನ ಪೊರ್ಮೋಷನ್ನಿಲ್ಲದಂತಾಗುತ್ತೆ ಇದು ನ್ಯಾಯವಲ್ಲ. ಕಳದರ್ಜೆಯ ಉದ್ಯೋಗಸ್ಥರನ್ನು ಖಾಲಿಯಾದ ಸಬ್ ಜಡ್ಜರ ಹುದ್ದೆಗೆ ನೇಮಿಸಬೇಕು.'

ಮೆ. ಚಾಂಡ್ಲ ಕಾಳಪ್ಪನವರು—ಸರಕಾರದವರು ಜನರ ಕೂಗಿಗೆ ಕೊಟ್ಟ ಉತ್ತರಗಳು ಅಸಮರ್ಪಕರ. ಹಾಗೂ ಆರ್ಥಿಕ ಸ್ಥಿತಿಯೂ ಕೂಡ ಬಹಳ ಸಂದಿಗ್ಧಾವಸ್ಥೆಗೆ ಮುಟ್ಟಿದೆ. ಹಿಂದುಳಿದ ಪಂಗಡದವರಿಗೆ ಕೂಗಿಗೆ ಸರಕಾರವು ಕವಿಗೊಟ್ಟಿರುವದಿಲ್ಲ. ಡಿ. ಬೋರ್ಡಿಗೆ ಒಬ್ಬರಿಗೆ ಅತೀ ಸಹಾಯಕವಾದದ್ದು. ಅದಕ್ಕೆ ಸರಕಾರವು ಇನ್ನಷ್ಟು ಸಹಾಯವನ್ನು ಕೊಡಬೇಕು. ರೈತರ ಕಷ್ಟವನ್ನು ವರ್ಣಿಸಲಾದ್ದಾಗಿದೆ. ಇವರಿಗೆ ಸಹಾಯ ಕೊಡುವದೇ ಸರಕಾರದ ಮುಖ್ಯ ಕರ್ತವ್ಯ. ಬಡ್ಜೆಟ್ಟಿನಲ್ಲಿ ಇವರಿಗೆ ಸಹಾಯಕವಾದ ವಿಷಯಗಳು ಒಳಗೆ ಸ್ವಲ್ಪವಾಗಿದೆ. ಇದು ನ್ಯಾಯವಲ್ಲ. ಇವರ ಕಷ್ಟ ಪರಿಹಾರಕ್ಕೆ ಸರಕಾರವು ಸಾಧ್ಯವಾದದ್ದನ್ನೆಲ್ಲ ಮಾಡಬೇಕು'

ಮೆ. ಐ. ಸಿ. ಸುಬ್ಬಯ್ಯನವರು—ಈ ಆರ್ಥಿಕ ಅಭಾವವು ಕೆಲ ವರ್ಷಗಳ ಮೊದಲೇ ಅನೇಕರಿಂದ ನಿರೀಕ್ಷಿಸಲ್ಪಟ್ಟಿತ್ತು. ಅಲ್ಲದೆ ಈ ಬಗ್ಗೆ ಎಚ್ಚರಿಕೆಗಳೂ ಕೊಡಲ್ಪಟ್ಟಿತ್ತು. ಈ ಮೊದಲು ವಾರ್ಷಿಕ ವಂತಿಗೆಯ ಪ್ರಸ್ತಾಪ ನಡೆಸಿದಾಗ ನಮ್ಮ ಸ್ಥಿತಿಯು ಅಷ್ಟೊಂದು ಹೀನವಾಗಿಲ್ಲವೆಂದು ಇಂಡಿಯಾ ಸರಕಾರವು ಉತ್ತರವಿತ್ತು. ಈಗ ನಮ್ಮ ಸ್ಥಿತಿಯು ಬಹಳ ಅಸಮಾಧಾನಕರವಾದ್ದಾಗಿದೆ. 1932ರಲ್ಲಿ ಎಲ್ಲಾ ಪಂಗಡಗಳ ಪರಿಷತ್ತಿಂದು 5 ಲಕ್ಷ ವಾರ್ಷಿಕ ವಂತಿಗೆ ಯಾ ದೊಡ್ಡ ಪ್ರಾಂತ್ಯ ದೊಡನೆ ವಿಕೀಕರಣ ಮಾಡುವಂತೆ ತೀರ್ಮಾನಿಸಿತು. ಆದರೆ ಈಗ ಆಗಿನದಕ್ಕಿಂತ ದುರಂತ ಸ್ಥಿತಿಯು ಬಂದಿದೆ. ಈಗ ಸಾವಾಗಿ ದೊಡ್ಡ ಪ್ರಾಂತ್ಯದೊಡನೆ ನಮ್ಮನ್ನು ಸೇರಿಸಿಕೊಳ್ಳುವಂತೆ ಬೇಡುವ ಸಮಯ ಒಂದಿದೆ. ಆರ್ಥಿಕ ಅಭಾವದಲ್ಲಿರುವ ಪ್ರಾಂತ್ಯಕ್ಕೆ ಹಣ ಸಹಾಯ ಮಾಡುವದು ಇಂಡಿಯಾ ಸರ್ಕಾರದ ಧ್ಯೇಯವಾಗಿರುವಾಗ್ಗೆ ಕೊಡಗಿಗೆ ಯಾತಕ್ಕೆ ಸಹಾಯವಿಲ್ಲ? 3 ಲಕ್ಷ ಸಾಲ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಇನ್ನು 2ಲಕ್ಷ ಹೆಚ್ಚು ಪಡೆದು ಅಭಿವೃದ್ಧಿ ಕಾರ್ಯಗಳನ್ನು ಮುಂದೂಡಬೇಕು. ಈ ಸಮಯದಲ್ಲಿ ಜನರ ಸಹಾಯಕ್ಕೆ ಸರಕಾರವು ಬರಲೇ ಬೇಕು. ಭೂಮಿ ಗಿರ್ ಬ್ಯಾಂಕನ್ನು ಒಡನೆ ಸ್ಥಾಪಿಸಬೇಕು. ಸುಧಾರಣೆಗಳ ವಿಚಾರವೂ ಮತ್ತು ವಾರ್ಷಿಕ ವಂತಿಗೆಯ ವಿಷಯವೂ ಒಂದನ್ನೊಂದು ಅವಲಂಬಿಸಿರುತ್ತೆ. ಹೆಚ್ಚು ಹಣವಿಲ್ಲದ ಸುಧಾರಣೆಗಳ ಪ್ರಯೋಗವು ಅಸಾಧ್ಯ. ಆದ್ದರಿಂದ ವಾರ್ಷಿಕ ವಂತಿಗೆಯ ವಿಷಯ ಮೊದಲು ತೀರ್ಮಾನವಾಗಬೇಕು. ಇಲ್ಲಿನ ಸ್ಟೇಂಡಿಂಗ್ ಕವಿಟಿಗೆ ಯಾವ ತರಹದ ಜವಾಬ್ದಾರಿಯೂ ಇಲ್ಲ. ಕೋ-ಆಪರೇಟಿವ್ ಇಲಾಖೆಯು ಅತೀ ಮುಖ್ಯವಾದದ್ದು. ಈ ವಿಚಾರದಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರನ್ನು ನೇಮಿಸುವುದು ಉಚಿತ. ವ್ಯವಸಾಯ ವಿಭಾಗವನ್ನು ಕುರಿತು ಎಲ್ಲಾ ವಿಷಯಗಳು ಹೇಳಲ್ಪಟ್ಟಿವೆ. ವಿದ್ಯಾ ಇಲಾಖೆಯಲ್ಲಿ ಸಿಸ್ಕು ಬಹಳ ಕಡೆಮೆಯಾಗಿದೆ. ಹೆಡ್ಡ್ ಮಾಸ್ಟರುಗಳನ್ನೂ ಮತ್ತು ಡಿ. ಇನ್ಸ್‌ಪೆಕ್ಟರನ್ನೂ ಕಾಲೋಚಿತವಾಗಿ ಆಜೆ ಈಜೆ ವರ್ಗಾಯಿಸಬೇಕು. ಎಲಿಮೆಂಟರಿ ಶಾಲೆಗಳಲ್ಲಿ 15 ವರ್ಷಗಳಿಂದ ಒಬ್ಬೊಬ್ಬ ಹೆಡ್ ಮಾಸ್ಟರುಗಳು ಅಲ್ಲೇ ಇರುವರು. ಮಂತ್ರಾಧಿಕಾರಿಗಳ ಹೆಸರಿನ ಜವಾಬಂದಿಯನ್ನು ಮಂತ್ರಿಗಳಿಗೆ ವರ್ಗಾಯಿಸಿದ್ದು ಅನ್ಯಾಯ. ಅದು ಮಂತ್ರಾಧಿಕಾರಿಗಳ ಹೆಸರಿನಲ್ಲೇ ಇರಬೇಕಾದದ್ದು. ಒಟ್ಟಿನಲ್ಲಿ ಕೊಡಗಿಗೆ ಇಂಡಿಯಾ ಸರ್ಕಾರದಿಂದ ನ್ಯಾಯವಾದ ಸಹಾಯ ದೊರೆಯದೆ ಪ್ರತ್ಯೇಕವಾಗಿರಲು ಸಾಧ್ಯವಿಲ್ಲ. ಆದ್ದರಿಂದ ನಮ್ಮ ಸ್ಥಿತಿಯನ್ನು ಸುಧಾರಿಸಲು ಒಳ್ಳೆ ಧನ ಸಹಾಯ ಅವಶ್ಯ.

ಸಭೆಯು ಮುಂದಿನ ದಿನಕ್ಕೆ ಮುಂದೂರಿಸಲಾಯಿತು.

(ಮುಂದುವರಿಯುವುದು)


ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ
ಭಾರತ ವಿಮೋರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯು, ನಿಮ್ಮ ಒಲುಮೆಯು ಈ ಸಂಸ್ಥೆಯಲ್ಲಿ
ತಪ್ಪದೆ ವಿಮೆಯನ್ನಿಳಿಸಿ.

ಮೊದಲಿನ 5 ವರ್ಷಗಳ ಮೌಲ್ಯವೇತನದ ಫಲಿತಾಂಶವಾಗಿ ಪ್ರತಿಯೊಂದು
1000 ರೂಪಾಯಿಗಳ ವಿಮೋಪತ್ರದ ಮೇಲು,—

ವರ್ಷಕ್ಕೆ 1ರ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯವೇತನದಲ್ಲಿ ಇಷ್ಟು ಬೋನಸನ್ನು ಹಾಚಿದ ಹಿಂದೀ ವಿಮೋಕಂಪೆನಿಗಳು
ಅತಿ ವಿರಳವೆಂಬುದನ್ನು ಮರೆಯದಿರಿ.)

ನಮ್ಮ ಪ್ರತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು—
ಬಿ. ಜಿ. ಬೆಳ್ಯಪ್ಪನವರು,
ವಸ್ತ್ರಗಳ ವ್ಯಾಪಾರಿ, ಮಡಿಕೇರಿ.

ಸುಂಟಿಕೊಪ್ಪ ಏಜೆಂಟರು—
ಏ. ಎಸ್. ಮೂಚಯ್ಯನವರು.
ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

(52—1)

# ಕೊಡಗು

ಫೆಬ್ರವರಿ ತಾ ೨೬ನೇ ಶುಕ್ರವಾರ ೧೯೩೬.

## ಕೊಡಗಿನ 1936-37ರ ಬಜೆಟ್.

ಕೊಡಗು ಸರ್ಕಾರದ ಫೈನಾನ್ಸ್ ಮೆಂಬರಾದ ಕಮಿಷನರವರು ಈ ತಾ. 24ರಲ್ಲಿ ಕೊಡಗು ನ್ಯಾಯವಿಧಾಕ ಸಭೆಯ ಮುಂದೆ 1936—1937ನೇ ವರ್ಷದ ಅಂದಾಜು ಆದಾಯ ವೆಚ್ಚದ ಪಟ್ಟಿಯನ್ನು ಇಟ್ಟಾಗ್ಯೆ ಮಾಡಿದ ಭಾಷಣದಲ್ಲಿ ಕೆಲವು ಆಲೋಚನಾಪರ ಮಾತುಗಳು ಇವೆ. ಇದರ ಸಾರಾಂಶವು ಇನ್ನೊಂದು ಕಡೆ ಕೊಡಲಾಗಿದೆ. 'ಕವುನ್ಸಿಲಿನ ಪ್ರಾರಂಭ ವರ್ಷಗಳಲ್ಲಿ ಎಚ್ಚರಿಕೆಯಿಂದ ಆರು ಲಕ್ಷ ರೂಪಾಯಿಗಳನ್ನು ಕೂಡಿಟ್ಟರು. ಒರುವ ಮಾರ್ಚ್ ಅಂತ್ಯದಲ್ಲಿ ಸುಮಾರು ಹತ್ತು ಲಕ್ಷ ರೂಪಾಯಿ ಸಾಲವಾಗಿ ನಿಲ್ಲುವುದು ಆದುದರಿಂದ 13 ವರ್ಷಗಳ ಕವುನ್ಸಿಲು ಜೀವವೂನದಲ್ಲಿ 16 ಲಕ್ಷ ರೂಪಾಯಿ ಹೆಚ್ಚು ಖರ್ಚಾಗಿದೆ' ಎಂದು ಅವರು ಹೇಳಿದರು. ಇದರ ಯಥಾರ್ಥವೇನೆಂದರೆ—ಕವುನ್ಸಿಲಿನ ಪ್ರಥಮ ಆರು ವರ್ಷಗಳಲ್ಲಿ ಆರು ಲಕ್ಷ ರೂಪಾಯಿ ಖರ್ಚು ಕಳೆದು ಉಳುವರಿಯಾಗಿತ್ತು. ನಂತರದ ಆರೇಳು ವರ್ಷಗಳಲ್ಲಿ ಈ ಉಳುವರಿಯನ್ನು ಮುಗಿಸಿ, ಹತ್ತು ಲಕ್ಷ ರೂಪಾಯಿ ಸಾಲ ಮಾಡಿದ್ದಾಗಿದೆ. ಆದುದರಿಂದ ಆದಾಯವನ್ನು ಏಏರೀತ ಏರ್ಪಡಿಸಿ ಅಥವಾ ದುಂದುಗಾರಿಕೆಯ ಖರ್ಚು ಆದದ್ದು ಕವುನ್ಸಿಲಿನ ಜೀವವೂನದ ಎಂಡನೇ ಅರ್ಧ ಭಾಗದಲ್ಲಿ ಮಾತ್ರ ವಾಗಿದೆ.

ಎಚ್ಚರಿಕೆಯಿಂದ ಉಳಿಕೆ ಮಾಡುವ ಧ್ಯೇಯವು ಕೈಗಾರಿಕೆಯ ದೇಶಕ್ಕೆ ಮಾತ್ರ ಸರಿಯಾದದೆಂತಲೂ, ಕೊಡಗಿನಂಥ ವ್ಯವಸಾಯಿಕ ದೇಶದಲ್ಲಿ ತಕ್ಕಷ್ಟು ಖರ್ಚು ಮಾಡಬೆ ಹೋದರೆ ಉತ್ಪತ್ತಿಯು ಕಡೆಮೆಯಾಗುವುದೆಂತಲೂ ಅವರು ಸೂಚಿಸಿದರು. ಇದರಲ್ಲಿ ತುಂಬಾ ನಿಜಾಂಶವಿದೆ. ಆದುದರಿಂದಲೇ ಕವುನ್ಸಿಲಿನ ಪ್ರಾರಂಭ ವರ್ಷಗಳಲ್ಲಿ ಉಳಿಕೆಯಾದ ಹಣವನ್ನು ದೇಶಾಭ್ಯುದಯ ಕಾರ್ಯಗಳಿಗೆ ಮುಖ್ಯವಾಗಿ ವ್ಯವಸಾಯ ಕ್ಷೇತ್ರದ ಅಭಿವೃದ್ಧಿಗೆ ಉಪಯೋಗಿಸಬೇಕೆಂದು ಆಗಿನ ಜನರ ಪ್ರತಿನಿಧಿಗಳು ಕವುನ್ಸಿಲಿನಲ್ಲಿ ಎಡೆಬಡದೆ ಕೂಗಿಕೊಳ್ಳುತ್ತಿದ್ದರಾಗಿದೆ. ಆದರೆ ಆಗಿನ ಅಧಿಕಾರಿಗಳಿಗೆ ಅದು ಒಪ್ಪಿಗೆಯಾಗಿಲ್ಲಿಲ್ಲ. ತಮ್ಮ ಅಭಿಪ್ರಾಯವನ್ನು ಜಾರಿಗೆ ತರುವಂಥ ಅಧಿಕಾರವು ಕವುನ್ಸಿಲಿನವರಿಗೂ ಇರಲಿಲ್ಲ. ಆದರೆ ತಡವಾದ ಮೇಲೆ ಈಗಿನ ಅಧಿಕಾರಿಗಳು ತಮಗಿಂತ ಮೊದಲಿದ್ದವರು ಮಾಡಿದ ತಪ್ಪನ್ನು ಒಪ್ಪಿಕೊಳ್ಳುತ್ತಿದ್ದಾರೆ. ಹೀಗೆಯೇ ಗಂಧದ ಉತ್ಪತ್ತಿಯ ವಿಷಯದಲ್ಲೂ ಆಗಿದೆ. ಖಾಸಗಿ ಜಾಗಗಳಲ್ಲಿರುವ ಗಂಧದ ಮರಗಳಿಗೆ ಬೋನಸ್ಸು ಕೊಡಬೇಕೆಂದು ಕವುನ್ಸಿಲ ಪ್ರಾರಂಭ ವರ್ಷಗಳಲ್ಲಿ ಎಷ್ಟು ಹೋರಾಡಿದರೂ ಅಧಿಕಾರಿಗಳು ಲಕ್ಷ್ಯ ಮಾಡಲಿಲ್ಲ. ಈಗ ಉತ್ಪತ್ತಿಯು ಕಡೆಮೆಯಾಗಿ ಖರ್ಚು ಮಿತಿಮೀರಿ, ಸಾಲವಾಗಿರುವ ಕಾಲದಲ್ಲಿ ಸರ್ಕಾರದವರಿಗೆ ಬೋನಸ್ಸು ಕೊಡುವುದರ ಪ್ರಯೋಜನವು ಕಂಡುಬಂದಿದೆ. ಇದನ್ನು ನೋಡುವಾಗ್ಯೆ 'ಅಟ್ಟವೇಲೆ ಒಲೆ ಉರಿಯಿತ, ಕೆಟ್ಟ ವೇಲೆ ಬುದ್ಧಿ ಒಂತು' ಎಂಬ ನಾಣ್ನುಡಿಯ ಜ್ಞಾಪಕ ಉಂಟಾಗುತ್ತದೆ. ಆದರೆ ಈ ವಿಚಾರಂಗಳಲ್ಲಿ 'ಮೂಡದೇ ಇರುವುದಕ್ಕಿಂತ ತಡವಾಗಿಯಾದರೂ ಮೂಡುವುದು ಲೇಸು' ಎಂಬುದನ್ನು ಮರೆಯಬಾರದು. ಆದುದರಿಂದ ಸರ್ಕಾರವು ಹಾಗೂ ದೇಶವು ಅಭಿವೃದ್ಧಿಯಾಗಬೇಕಾದರೆ ವ್ಯವಸಾಯಿಗಾರರ ಸ್ಥಿತಿಯು ಉತ್ತಮವಾಗಬೇಕು, ಅದಕ್ಕಾಗಿ ಸರ್ಕಾರವು ತಕ್ಕಷ್ಟು ಖರ್ಚು ಮಾಡುತ್ತಲೇ ಇರಬೇಕು ಎಂಬುದನ್ನು ಸರ್ಕಾರದ ಅಧಿಕಾರಿಗಳು ತಡವಾಗಿಯಾದರೂ ಒಪ್ಪಿಕೊಂಡದ್ದಕ್ಕೆ ಅವರನ್ನು ಅಭಿನಂದಿಸಬೇಕಾಗಿದೆ.

ಕವಿಷನರವರು ಕೊಡಗನ್ನು ಒಂದು ಕಾಫಿ ತೋಟಕ್ಕೆ ಹೋಲಿಸಿ, ಖರ್ಚಿನ ತಂಗತಿಯನ್ನು ನ್ಯಾಯವಾದ ಮಟ್ಟಿಗೆ ಇಟ್ಟುಕೊಳ್ಳದೆ ಹೋದರೆ ಒಳ್ಳೇ ಉತ್ಪತ್ತಿಯನ್ನು ದೊರೆಯಲಾರದು ಎಂದು ಹೇಳಿದರು. ಅದರೆ ಖರ್ಚು ಮಾಡುವ ವಿಧಾನಕ್ಕೆ ತುಂಬಾ ಗಮನಕೊಡಬೇಕಾಗಿದೆ. ಕಾಫಿ ತೋಟವನ್ನು ಖರ್ಚು ಮಾಡಬೇಕೆಂದು ಹೇಳಿ, ಅದರ ಸುಪರಿಂಟೆಂಡೆಂಟರಿಗೂ, ಮೇನೇಜರಿಗೂ, ಅಂದಾ ಸಿಬ್ಬಂದಿಯವರಿಗೆ ದುಂದುಗಾರಿಕೆಯ ಸಂಬಳ ಮತ್ತು ಎಲೋವೆನ್ಸ್ ಕೊಟ್ಟು ತೋಟಕ್ಕೆ ಅಗತ್ಯ, ಗೊಬ್ಬರ ಮುಂತಾದವು ಅತ್ಯಗತ್ಯ ಕೆಲಸಗಳನ್ನು ಮಾಡದೆ ತೋಟವೆಂದಿಗೂ ಚೀಗೆ ಉದ್ಧಾರವಾಗದೆಂಬ ಹಾಗೆಯೇ ಸರಕಾರದ ಆಡಳಿತೆಯ ಸಿಬ್ಬಂದಿಯವರಿಗೆ ದುಂದುಗಾರಿಕೆಯ ಖರ್ಚನ್ನು ಮಾಡುತ್ತಾ, ವ್ಯವಸಾಯ ಅಭಿವೃದ್ಧಿಯ ಕೆಲಸಗಳಿಗೆ ಹಣವೇನೂ ವ್ಯಯ ಮಾಡದೆ ಹೋದರೆ ದೇಶವು ಸ್ಮಶಾನಗತಿಯನ್ನು ಹೊಂದುವದು ಮತ್ತು ಸರ್ಕಾರವು ದಿವಾಳಿಯಾಗುವುದು ಖಂಡಿತ ಆದುದರಿಂದ ಇನ್ನಾದರೂ ಸರ್ಕಾರದವರು ವ್ಯವಸಾಯದ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಸಾಕಷ್ಟು ನಿಗವಿಡುವರಾಗಿ ನಂಬುತ್ತೇವೆ.

ಈ ವರ್ಷದ ಅಂದರೆ 1935—36ನೇ ವರ್ಷದ ಅಂದಾಜು ಒಡ್ಜೆಟ್ಟಿನಲ್ಲಿ ರೂ. 2,78,000 ಖರ್ಚಿಗೆ ಆದಾಯವನ್ನು ಎರಿಂದೆಂದು ಕಳೆದ ವರ್ಷ ಅಂದಾಜು ಮಾಡಲಾಗಿತ್ತು. ಆದರೆ ಕೆಲವು ತಿಂಗಳುಗಳ ಹಿಂದೆ ಎಕವುಂಟೆಂಟ್ ಜನರಲರು ಕೊಟ್ಟ ಲೆಕ್ಕದ ಪ್ರಕಾರ ಆ ಸಂಖ್ಯೆಯು ರೂ 3,17,000ಕ್ಕೆ ಏರುವುದಂತೆ. ಆದರೆ ಸ್ಥಳೀಯ ಸರ್ಕಾರದವರ ಅನುಭವದ ಮೇರೆ ಅದು ರೂ 2,85,000 ಕ್ಕೆ ಮಾತ್ರ ಏರುವದೆಂದು ಫೈನಾನ್ಸ್ ಮೆಂಬರರು ಸೂಚಿಸಿದರು. ಹಾಗೂ 35—36ನೇ ವರ್ಷದಲ್ಲಿ ಖರ್ಚಿಗೆ ಉತ್ಪತ್ತಿಯನ್ನು ಎರಿ ಇಂಡಿಯಾ ಸರಕಾರದಿಂದ 2¾ ಲಕ್ಷ ರೂಪಾಯಿಗಿಂತ ಹೆಚ್ಚು ಸಾಲವೂಡಬೇಕೆಂದಾಯಿತು.

ಒರುವ ವರ್ಷ ಅಂದರೆ 1936—37ನೇ ವರ್ಷದಲ್ಲಿ ಸರ್ಕಾರದ ಒಟ್ಟು ಆದಾಯವು ರೂ. 10,14,000 ಮತ್ತು ಖರ್ಚು ರೂ. 14,10,000 ಎಂದು ಅಂದಾಜು ಮಾಡಲಾಗಿದೆ. ಈ ಅಂದಾಜಿನ ಮೇರ 1936—37ರಲ್ಲಿ ರೂ. 3,36,000 ಖರ್ಚು ಆದಾಯವನ್ನು ಎರಿಂವುದು. ಈ ಅಂದಾಜು ಪಟ್ಟಿಯಲ್ಲಿ ಕಂದಾಯ ಮಾಫಿಯನ್ನು ಲೆಕ್ಕ ಹಾಕಿರುವುದಿಲ್ಲ. ಅಬ್ಕಾರಿ ಉತ್ಪತ್ತಿಯು ಅಂದಾಜಿಗಿಂತ ಸ್ವಲ್ಪ ಕಡಮೆಯಾಗುವ ಸಂಭವವಿದೆ. ಆದುದರಿಂದ ಕಂದಾಯದಲ್ಲಿ ಒಂದು ಭಾಗ ಮಾಫಿ ಬಬ್ಬರ ವರ್ಷಾಂತ್ಯದಲ್ಲಿ ಖರ್ಚು ವೆಚ್ಚವನ್ನು 4 ಲಕ್ಷ ರೂಪಾಯಿಗಿಂತ ಹೆಚ್ಚಾಗಿಯೇ ಎರಿಂವದೆಂದು ತೋರಿಬರುತ್ತದೆ. ಇದರಿಂದ ಈ ಪ್ರಾಂತ್ಯವು ಹೆಚ್ಚಿನ ಕಾಲ ಪ್ರತ್ಯೇಕವಿದ್ದು ಆಡಳಿತ ನಡೆಸಲಾರದಂಬುದು ವಿಷದವಾಗುತ್ತದೆ. ಆದಾಯವು ಕಡೆಮೆಯಾಗಿದ್ದರೂ ಕೂಡ ಸರ್ಕಾರದವರು ಅನಾವಶ್ಯಕ ಹುದ್ದೆಗಳನ್ನು ಹೆಚ್ಚಿಸಿಯೂ, ದೊಡ್ಡ ಉದ್ಯೋಗಸ್ಥರಿಗೆ ವಿಪರೀತ ಸಂಬಳ ಕೊಟ್ಟೂ ಕರಣ ಮಾಡ್ಜಿಕೊಂಡು ದುಂದುಗಾರಿಕೆಯ ಆಡಳಿತವನ್ನು ನಡೆಸುತ್ತಿರುವುದರ ಅರ್ಥವೇನೆಂದು ಗೊತ್ತಾಗುವುದಿಲ್ಲ. ಇಂಡಿಯಾ ಸರ್ಕಾರದಿಂದ ದ್ರವ್ಯ ಸಹಾಯ ದೂರವಿದ ಇಲ್ಲಿಯ ಆಡಳಿತ ನಡೆಸಲು ಸೌಕರ್ಯವಿಲ್ಲವೆಂದು ತೋರಿಸಿ, ವಾರ್ಷಿಕ ವಂತಿಗ ಪಡೆಯಲಿಕ್ಕಾಗಿಯೋ, ಅಥವಾ ಇಲ್ಲಿಯ ಸರ್ಕಾರಕ್ಕೆ ದೊಡ್ಡ ಸಾಲ ಹೊರಿಸಿ ಒಟ್ಟು ಇದನ್ನು ಸ್ವತ್ಯೇಕ ಪ್ರಾಂತ್ಯವಾಗಿಡಲು ಸಾಧ್ಯವಿಲ್ಲವೆಂದು ತೋರಿಸಿ, ದೊಡ್ಡ ಪ್ರಾಂತ್ಯಕ್ಕೆ ಸೇರಿಸಬಿಡಲಿಕ್ಕಾಗಿಯೋ ಈ ಪ್ರಯತ್ನವೆಂಬುದು ತಿಳಿಯದಾಗಿದೆ. ಇಂಡಿಯಾ ಸರ್ಕಾರದವರು ಬೇರೆ ಪ್ರಾಂತ್ಯಗಳಿಗೆ ಸಹಾಯಧನಗಳೊಂದಿಗೆ ವಾರ್ಷಿಕ ವಂತಿಗೆ ಕೊಡುತ್ತಿರುವಾಗ್ಯೆ ಕೊಡಗಿಗೆ ಮಾತ್ರ ಕೊಡದಿರುವುದರಲ್ಲಿ ನ್ಯಾಯವಿಲ್ಲ. ಸಬ್‌ವೆನ್ಶನ್ ಪಡೆಯುವ ಹಕ್ಕು ಕೊಡಗಿಗೆ ಇದೆ. ಆದುರಿಂದ ಕವುನ್ಸಿಲ ಸಕ್ಕ ವರ್ಷಕ್ಕೆ ಐದು ಲಕ್ಷ ರೂಪಾಯಿ ಸಬ್‌ವೆನ್ಶನ್ ಪಡೆಯುವ ಯತ್ನವನ್ನು ಸಂಕಾಂದವರು ಮಾಡಬೇಕಾಗಿದೆ. ಅದಕ್ಕೆ ದೇಶದವರ ಸಂಪೂರ್ಣ ಬೆಂಬಲವಿದೆ.

## ಶ್ರೀ. ರಾಮಕೃಷ್ಣ ಪರಮಹಂಸರ ಶತಮಾನೋತ್ಸವ.

ಶ್ರೀ ರಾಮಕೃಷ್ಣ ಪರಮಹಂಸರ ಶತಮಾನೋತ್ಸವವು ಅವರ ಈ ವರ್ಷದ ಜನ್ಮದಿನವಾದ ಫೆಬ್ರವರಿ 24 ರಿಂದ ಒರುವ ವರ್ಷ ಫೆಬ್ರವರಿ ಜನ್ಮ ದಿನವರೆಗೆ ಅಂದರೆ ಒಂದು ವರ್ಷದ ತನಕ ಪ್ರಪಂಚದ ಅನೇಕ ಕಡೆಗಳಲ್ಲಿ ಅತಿ ಉತ್ಸಾಹದಿಂದ ನಡೆಸಲ್ಪಡುವುದು. ಕೊಡಗಿನಲ್ಲೂ ಒರುವ ಏಪ್ರಿಲ್ ತಿಂಗಳಲ್ಲಿ ಜರುಗಿಸುವ ಏರ್ಪಾಡಿದೆ.

ಶ್ರೀ ರಾಮಕೃಷ್ಣರ ಪುಣ್ಯ ಪವಿತ್ರವಾದ ಜೀವನ ಚರಿತ್ರೆಯು, ಉಪದೇಶಾಮೃತವೂ ಎಷ್ಟೂ ಮಟ್ಟಿಗೆ ಜಗತ್ತಿನ ಕಲ್ಯಾಣಕ್ಕೂ, ಶಾಂತಿಗೂ ದಾರಿ ತೋರಿಸುತ್ತಿತ್ತು ಇದೆ ಎಂಬುದನ್ನು ಇನ್ನು ಮುಂದೆ ಸಂಕ್ಷೇಪವಾಗಿ ಈ ಪತ್ರಿಕೆಯಲ್ಲಿ ಪ್ರಕಟಿಸಲಿರುವೆವು. ಈ ಶತಮಾನೋತ್ಸವಾರಂಭದಲ್ಲಿ ಶ್ರೀ ರಾಮಕೃಷ್ಣ ಮಿಷನಿನ ಮತ್ತು ಮಿಷನಿನ ಮಹಾಧ್ಯಕ್ಷರಿತ್ತ ಸಂದೇಶವನ್ನು ಇನ್ನೊಂದು ಕಡೆ ಕೊಟ್ಟಿರುವೆವು.

## ಕೌನ್ಸಿಲಿನ ತರಾವುಗಳ ಮೇಲೆ ಚೀಫ್ ಕಮಿಷನರವರ ಹುಕುಂ.

ಕಡಲೆ ಕೌನ್ಸಿಲು ಅಧಿವೇಶನದಲ್ಲಿ ಪಾಸಾದ ತರಾವುಗಳನ್ನು ಕುರಿತು ಚೀಫ್ ಕಮಿಷನರವರು ಕೊಟ್ಟ ಹುಕುಂಗಳನ್ನು ಈ ಕಳಗೆ ಕೊಡಲಾಗಿದೆ.

ತರಾವು (83)— 'ಕೊಡಗಿನಲ್ಲಿ ಪ್ಲೇಗು ರೋಗವನ್ನು ಹೋಗಲಾಡಿಸಲು ಇನ್ನೂ ಹೆಚ್ಚಿನ ವಿಶೇಷ ಕ್ರಮಗಳನ್ನು ಜಾರಿಗೆ ತರಬೇಕು.'

ಹುಕುಂ—ಈ ತರಾವನ್ನು ಚೀಫ್ ಕಮಿಷನರವರು ಅಂಗೀಕರಿಸುತ್ತಾರೆ. ಪ್ಲೇಗು ರೋಗವು ತಲೆಯೆತ್ತದಂತೆ ಸ್ಥಳೀಯ ಸರಕಾರವು ಸಾಧ್ಯವಾದ ಮಟ್ಟಿಗೆ ಪ್ರಯತ್ನಿಸುವದಲ್ಲದೆ, ಪ್ಲೇಗು ತಲೆದೋರಿದ ಸ್ಥಳಗಳಿಂದ ಪ್ಲೇಗು ರೋಗವನ್ನು ಹೋಗಲಾಡಿಸಲು ತಕ್ಕ ಕ್ರಮಗಳನ್ನು ಜರುಗಿಸಲಾಗುವದು.

ತರಾವು (92)—'ವೆಟರಿನೆರಿ ಇಲಾಖೆಯು ಅಭಿವೃದ್ಧಿಗಾಗಿ ತಕ್ಕ ಧನ ಸಹಾಯವೂಡುವದು.'

ಹುಕುಂ—ಸ್ಥಳೀಯ ಸರಕಾರವು ಕೊಡಗಿನಲ್ಲಿ ವೆಟರಿನೆರಿ ಇಲಾಖೆಯ ಒಡಾವಣೆಯ ಮಹತ್ವವನ್ನು ಮನಗಂಡಿರುವದು; ಅಲ್ಲದೆ ಅವಕಾಶ ದೊರತಾಗಲೆಲ್ಲ ಈ ಇಲಾಖೆಯನ್ನು ವಿಸ್ತರಿಸುವದು. ಆದರೆ, ಮದರಾಸು ಆಧಿಕ್ಯದ ದರ್ದಿನಿಂದಿನ ವೆಟರಿನೆರಿ ಉದ್ಯೋಗಸ್ಥರ ಸಂಬಳವನ್ನು ವಿರಿಸಲಾಗುವದಿಲ್ಲ. ಈ ಕಾರಣದಿಂದ ಈ ತರಾವನ್ನು ಅಂಗೀಕರಿಸಲಾಗುವದಿಲ್ಲ.

ತ—(94) ವ್ಯವಸಾಯ ಇಲಾಖೆಯನ್ನು ಅಭಿವೃದ್ಧಿಗೊಳಿಸಲು ಹೆಚ್ಚಿಗೆ ಹಣ ಸಹಾಯ ಕೊಡಬೇಕು.

ಹು—ವ್ಯವಸಾಯದ ಅಭಿವೃದ್ಧಿಗಾಗಿ ಇಂಡಿಯಾ ಸರಕಾರದಿಂದ ಧನ ಸಹಾಯ ಕೇಳಲಾಗುವದಿಲ್ಲ. ಯಾತಕ್ಕೆಂದರೆ—ವ್ಯವಸಾಯವು ಪ್ರಾಂತೀಕ ವಿಚಾರ ಪ್ರಾಂತೀಕ ವ್ಯವಸಾಯ ಇಲಾಖೆಯ ಅಭಿವೃದ್ಧಿಗೆ ಪ್ರಾಂತೀಕ ಸರಕಾರವೇ ಹಣ ಒದಗಿಸಬೇಕು. ಇಂಡಿಯಾ ಸರಕಾರವು ಪರಿಶೋಧನಾ ಕಾರ್ಯ (ರಿಸರ್ಚ್) ಮತ್ತು ನೂತನವರ ಬೋಧನೆ (ಎಸ್ಪರಿಮೆಂಟ್ ಎಡ್ವೈಸ್) ಮುಂತಾದವುಗಳಿಂದ ಸಹಾಯ ಕೊಡುವದಲ್ಲದೆ ಹಣದ ರೂಪದಲ್ಲಿ ಹಣ ಕೊಡುವುದಿಲ್ಲ. ಆದ್ದರಿಂದ ಈ ತರಾವನ್ನು ಅಂಗೀಕರಿಸಲಾಗುವದಿಲ್ಲ. ಶೈತಂಗ ಸಹಾಯವನ್ನೀಯುವ ವಿಷಯದಲ್ಲಿ ಸ್ಥಳೀಯ ಸರಕಾರವು 1936—37ನೇ ವರ್ಷದ ಒಡ್ಜೆಟ್ಟಿನಲ್ಲಿ ವ್ಯವಸಾಯ ಗಾಂಧರಿಗೆ ಸಾಲಕೊಡಲು ರೂ. 87 000 ರೂ. ಇಟ್ಟಿದೆ. 1935—36 ನೇ ವರ್ಷದಲ್ಲಿ ಬರೇ ರೂ. 67,000 ಇಡಲಾಗಿತ್ತು. ಕಾಫಿ ಪ್ಲಾಂಟರುಗಳಿಗೆ ಹೆಚ್ಚಿನ ಸಹಾಯ ಕೊಡುವ ವಿಚಾರವು ಇನ್ನೂ ಆಲೋಚಿಸಲ್ಪಡುತ್ತಿದೆ.

ತ—(95)—'ಹಂಣು ಹುಪಲುಗಳ ವ್ಯವಸಾಯ ಮತ್ತು ದನಗಳ ತಳಿಯನ್ನು ಉತ್ತಮಗೊಳಿಸಲು ದ್ರವ್ಯಸಹಾಯ.'

ಹು—ಇಂಪೀರಿಯಲ್ ಕೌನ್ಸಿಲ್ ಆಫ್ ಎಗ್ರಿಕಲ್ಚರ್ ರಿಸರ್ಚ್ ಸಂಸ್ಥೆಗೆ, ಬರೇ ಸ್ಥಳೀಯ ಪ್ರಾಮುಖ್ಯತೆಯುಳ್ಳ ಯಾವದೇ ಯೋಜನೆಗೆ ಧನ ಸಹಾಯವನ್ನು ಕೊಡಲಾಗುವದಿಲ್ಲ. ಆದ್ದರಿಂದ ಈ ಪ್ರಾಂತವು ಯಾವದೇ ಫಲಗಳ ವ್ಯವಸಾಯ ಮತ್ತು ದನಗಳ ತಳಿಯ ಅಭಿವೃದ್ಧಿಗೆ ಹಣ ಸಹಾಯ ಕೊಡಲಾಗುವದಿಲ್ಲ. ಈ ಕವುನ್ಸಿಲಿನ ಕೆಲವು ಪರಿಶೋಧನಾ ಯೋಜನೆಗಳಿಂದ ಕೊಡಗಿಗೆ ಪ್ರಯೋಜನವಾಗಬಹುದೆಂದು ನಿರೀಕ್ಷಿಸಲಾಗಿದೆ. ಅಲ್ಲದೆ ಈ ಕವುನ್ಸಿಲು, ಒಟ್ಟು ಪಬ್ಲಿಸಿಟಿಯನ್ನು, ಇಲ್ಲಿನ ದನಗಳ ಸ್ಥಿತಿಯನ್ನು ಪರಿಶೋಧಿಸಲು ಕಳುಹಿಸಿತ್ತು, ಅವರು ಇಲ್ಲಿನ ದನಗಳ ತಳಿಯನ್ನು ಉತ್ತಮಗೊಳಿಸಲು ಕೆಲವು ಉತ್ತಮ ಅಭಿಪ್ರಾಯವನ್ನು ಕೊಟ್ಟಿರುವರು. ಈ ಪ್ರಾಂತದ ಸ್ಥಿತಿಗನುಸಾರವಾಗಿ ಈ ಸೂಚನೆಗಳನ್ನು ಜಾರಿಗೆ ತರಲು ಚೀಫ್ ಕಮಿಷನರವರು ಅಭಿಪ್ರಾಯಪಡುತ್ತಾರೆ. ಹಂಣು ಹುಪಲುಗಳ ವ್ಯವಸಾಯದ ಒಗ್ಗೆ ಸಹ ಸ್ಥಳೀಯ ಸರಕಾರದಿಂದ ತಕ್ಕ ಶುದ್ಧಿ ವಹಿಸಲಾಗುವದು ಆದರೆ ಕವುನ್ಸಿಲಿನಲ್ಲಿ ಪಾಸಾದ ತರಾವನ್ನು ಚೀಫ್ ಕಮಿಷನರವರಿಗೆ ಅಂಗೀಕರಿಸಲಾಗುವದಿಲ್ಲ.

ತ—(96) ಕೊಡಗಿನಲ್ಲಿ ಮಲೇರಿಯಾ ಜ್ವರವನ್ನು ನಿವಾರಿಸಲು ತಕ್ಕ ಕ್ರಮಗಳಿಗಾಗಿ ಸಾಕಷ್ಟು ದ್ರವ್ಯ ಸಹಾಯವನ್ನು ಕೊಡಬೇಕು.'

ಹು—ಚೀಫ್ ಕಮಿಷನರವರು ಈ ತರಾವನ್ನು ಅಂಗೀಕರಿಸಿರುತ್ತಾರೆ. ಸ್ಥಳೀಯ ಸರ್ಕಾರವು ಈ ವಿಷಯದಲ್ಲಿ ಹೆಚ್ಚು ಶ್ರದ್ಧೆ ವಹಿಸಿರುವದು. ಈ ಬಾಬಿನಲ್ಲಿ ಅದರ ಪ್ರಯತ್ನಗಳ ಪರಿಣಾಮವು ಹೆಚ್ಚು ತೃಪ್ತಿಕರವಾಗಿದೆ. ಈ ವಿಷಯವಾಗಿ ಪ್ರತಿಬಂಧಕೋಪಾಯಗಳಿಗಾಗಿ ಹೆಚ್ಚು ಹಣ ಕಾಯ್ದಿಡಲಾಗಿದೆ.

ತ—(100) 'ಕಾನ್ಸಿಲ್ ಆಫ್ ಸ್ಟೇಟಿಗೆ ಒಟಿನ ಹಕ್ಕನ್ನು ವಿಸ್ತರಿಸಬೇಕು.

ಹು—ಈ ತರಾವನ್ನು, ಅದರ ಸಂಬಂಧದ ಜರ್ಜಿಗಳನ್ನು ಡಿಲಿಮಿಟೇಶನ್ ಕಮಿಟಿಯ ಮುಂದಿಡುವಂತೆ ಇಂಡಿಯಾ ಸರಕಾರಕ್ಕೆ ಕಳುಹಿಸಲಾಗಿದೆ.

ತ—(101) 'ಲೆಜಿಸ್ಲೇಟಿವ್' ಎಸೆಂಬ್ಲಿಗೆ ಪ್ರತಿನಿಧಿಯನ್ನು ಆರಿಸಲು ಜುನಾಯಿತ ಕಾನ್ಸಿಲು ಮೆಂಬರುಗಳಿಗೆ ಮಾತ್ರ ಒಟಿನ ಹಕ್ಕು ಇರತಕ್ಕದ್ದು.'

ಹು—ಈ ತರಾವನ್ನು ಅಂಗೀಕರಿಸಲಾಗುವುದಿಲ್ಲ. ಈ ವಿಷಯದಲ್ಲಿ ನೇಮಿಸಲ್ಪಟ್ಟ ಸದಸ್ಯರುಗಳ ಸದಸ್ಯತನದ ಹಕ್ಕನ್ನು ನಿರ್ಬಂಧಿಸುವ ಈ ತರಾವಿನ ಸೂಚನೆಯನ್ನು ಕುರಿತು ಇಂಡಿಯಾ ಸರಕಾರಕ್ಕೆ ಸಿಫಾರಸ್ಸು ಮಾಡಲಾಗುವುದಿಲ್ಲ.

ತ—(104) 'ನ್ಯಾಯವಿಭಾಯಕ ಕಾರ್ಯ ಮತ್ತು ಕಾರ್ಯ ನಿರ್ವಾಹಕ ಕಾರ್ಯ (ಜುಡಿಷ್ಯಲ್ ಮತ್ತು ಎಗ್ಸಿಕ್ಯುಟಿವ್)ಗಳನ್ನು ಬೇರ್ಪಡಿಸಬೇಕು.'

ಹು—ಸ್ಥಳೀಯ ಸರ್ಕಾರದ ಅಧಿಕಾರಿಗಳ ವರ್ಗದವರಲ್ಲಿ ಎಗ್ಸಿಕ್ಯುಟಿವ್ ಮತ್ತು ಜುಡಿಷ್ಯಲ್ ಕಾರ್ಯಗಳನ್ನು ಬೇರ್ಪಡಿಸಲು ಎಷ್ಟೋ ಏರ್ಪಾಡು ಮಾಡಿದೆ. ಸಂದರ್ಭ ದೊರತಾಗಲೆಲ್ಲ ಈ ಸಂಬಂಧ ತಕ್ಕ ಏರ್ಪಾಡು ಮಾಡಲಾಗುವುದು. ಆದರೆ ಒಡನೆ ಈ ಕಾರ್ಯವನ್ನು ಕೈಕೊಳ್ಳುವ ಭರವಸೆ ಕೊಡಲಾಗುವುದಿಲ್ಲ.

ತ—(46) ಜುಡಿಷ್ಯಲ್ ಕಮಿಷನರ್ ಕೋರ್ಟಿನ ಅಪೀಲು ಕೇಸುಗಳ ರಿಕಾರ್ಡು ಪ್ರಿಂಟು ಮಾಡಲು ಪುಟ ಒಂದಕ್ಕೆ 12 ಆ

ಣೆ ದರ ಮಾಡಬೇಕು' (ಈ ತರಾವು 1933ನೇ ಅಕ್ಟೋಬರ್ 23ರಲ್ಲಿ ಚರ್ಚಿಸಲ್ಪಟ್ಟು ಹಿಂತೆಗೆಯಲ್ಪಟ್ಟಿತ್ತು.)

ಹು—ಇಂಡಿಯಾ ಸರ್ಕಾರವು ಪುಟಕ್ಕೆ ರೂ. 2ರಂತೆ (ಈ ದರವು ಸ್ಥಳೀಯ ಪೈಪ್ಸುಗಳ ದರವನ್ನು ಹೆಚ್ಚುಕಮ್ಮಿ ಸರಿ ಹೋಲುತ್ತದೆ) ಜುಡಿಶ್ಯಲ್ ರಿಕಾರ್ಡುಗಳನ್ನು ಕಕ್ಷಿಗಾರರ ಖರ್ಚಿನಲ್ಲಿ ಬೆಂಗಳೂರು ರಿಸಿಡೆನ್ಸಿ ಪ್ರೆಸ್ಸಿನಲ್ಲಿ ಪ್ರಿಂಟು ಮಾಡಿಸುವಂತೆ ತೀರ್ಮಾನಿಸಿದೆ.

ಈ ವಿಷಯವನ್ನು ಇನ್ನೂ ಅಜಮಾಯಿಸಿ ಈ ದರವು ಸ್ಥಳೀಯ ಮುದ್ರಣಾಲಯಗಳ ದರಕ್ಕೆ ಸಮ ಹೋಲದಿದ್ದಲ್ಲಿ ಇಂಡಿಯಾ ಸರ್ಕಾರಕ್ಕೆ ಅವರ ಆರ್ಡರನ್ನು ಪುನರಾಲೋಚಿಸುವಂತೆ ಬರೆಯಲಾಗುವುದು.

ಮಸೂದೆ—'ಕೊಡಗಿನ ಹೋ-ಆಪರೇಟಿವ್ ಸೊಸೈಟಿಗಳನ್ನು ಕುರಿತು ಇರುವ ಕಾನೂನನ್ನು ತಿದ್ದುಪಡಿ ಮಾಡುವ ಮಸೂದೆ.'

ಹು—ಈ ಮಸೂದೆಯ ವಿಷಯ ಆಲೋಚನೆಗೆ ಮುಂದಿನ ಸರ್ವಾಸ್ಸಲು ಅಧಿವೇಶನದ ವರೆಗೆ ಸಮಯ ಮುಂದರಿಸಲಾಗಿದೆ.

## ಪಿಳ್ಳ ದೇಶ.

ಈ ತಾ. 21 ಮತ್ತು ತಾ. 28ರಲ್ಲಿ ಮಡಿಕೇರಿಯಲ್ಲಿ ಕುದುರೆ ಶರತ್ತುಗಳು ನಡೆದವು

ನಾವೋಕ್ಲು ನಾಡು ಕುಂಜಿಲ ಗ್ರಾಮದಲ್ಲಿ ಸಿಡುಬು ರೋಗವು ತಲೆದೋರಿದೆಯೆಂದು ನಮ್ಮ ಮೂನ.

ದಿವಂಗತ ಕೊಂಗಂಡ ಯಸ್ ಸುಬ್ಬಯ್ಯನವರ ಪತ್ನಿಯವರು ಈ ತಾ. 27ರಲ್ಲಿ ಮಡಿಕೇರಿಯಲ್ಲಿ ಸ್ವರ್ಗಸ್ಥರಾದರು.

ಪಾಡಿ ಸುಬ್ರಹ್ಮಣ್ಯ (ಇಗ್ಗುತಪ್ಪ) ದೇವರ ಕಲಾಡ್ಡ ಹಬ್ಬವು ಮಾರ್ಚಿ ತಾ. 7ರಲ್ಲಿ ನಡೆಯುವದಾಗಿ ತಿಳಿಯುತ್ತೇವೆ.

ಬರುವ ಮಾರ್ಚಿ ತಿಂಗಳಿಂದ ವೀರಾಜಪೇಟೆಯಲ್ಲಿ ವಾರಕ್ಕೊಂದು ದಿನ ಪೇಟೆಯನ್ನು ಅಭ್ಯತ್ರೆ ತೆಯುವ ಏರ್ಪಾಡು ಮಾಡಲಾಗಿದೆಯೆಂದು ತಿಳಿಯುತ್ತೇವೆ.

ಕೊಡಗು ನ್ಯಾಯ ವಿಧಾಯಕ ಸಭೆಯ ಬಡ್ಜೆಟ್ ವಿಚಾರಣೆಗು ಈ ತಾ 24ರಿಂದ 26ರ ವರೆಗೆ ಮಡಿಕೇರಿಯಲ್ಲಿ ನಡೆಯಿತು. ಚೀಫ್ ಕಮಿಷನರು ಅಧ್ಯಕ್ಷರಾಗಿದ್ದರು.

ಈ ತಾ. 21ರಲ್ಲಿ ಇಲ್ಲಿ ಜಾತ್ರೆಯಲ್ಲಿ ಸಿ. ಪಿ ಸಿ ಸರ್ವಿಸಿನವರ ಒಸೆಪ್ಪಿಂಡು ವಂಗುಚಿ ಬಿದ್ದು ಇಬ್ಬರು ಪ್ರಯಾಣಿಕರಿಗೆ ಮೂತ್ರ ಸ್ವಲ್ಪ ಜಖಂ ಆಯಿತೆಂದು ನಮ್ಮ ಮೂನ.

ವೀರಾಜಪೇಟೆಯಲ್ಲಿ ಒಟ್ಟೆ ವ್ಯಾಪಾರಿಯಾಗಿರುವ ಮೆ. ಮೂಡೆರ ಐಯ್ಯಂಣನವರ ಪತ್ನಿಯವರು ಈ ತಾ 18ರಲ್ಲಿ ಅವರ ಕೋಕೇರಿ ಮನೆಯಲ್ಲಿ ಶಿವಾಧೀನರಾದರೆಂದು ತಿಳಿಯುತ್ತೇವೆ.

ಸಾಬೆದೆ, ಮರ, ಬಿದಿರು ಮುಂತಾದವುಗಳನ್ನು ಸಾಗಿಸಲು ಬೇಕಾದ ಪರವಾನಗಿಗಾಗಿ ಬರೆಯುವ ಅಪ್ಲಿಕೇಶನಿಗೆ ಸ್ಟ್ಯಾಂಪು ಚಾರ್ಜನ್ನು 12 ಆಣೆಯಿಂದ 2 ಆಣೆಗೆ ಇಳಿಸಿರುವರಾಗಿ ತಿಳಿಯಬರುತ್ತದೆ.

ಹೊಸ ಚೀಫ್ ಕಮಿಷನರಾದ ಮೆ ಎಲ್. ಜಿ. ಎಲ್. ಈನರ್ಸ್‌ರವರು ರಾಜಭಕ್ತಿಯ ಪ್ರಮಾಣ ಮಾಡುವ ದರ್ಬಾರು ಈ ತಾ. 24ರ ಬೆಳಿಗ್ಯೆ 10 ಗಂಟೆಗೆ ಮಡಿಕೇರಿ ಕವುನ್ಸಿಲ್ ಹಾಲ್‌ನಲ್ಲಿ ನಡೆಸಿತು.

ಕೊಡಗು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಆಫೀಸಿನ ಮೆ. ಜನ್ನಿರ ಮುಂದಪ್ಪನವರು ಮತ್ತು ಕಮಿಷನರವರ ಆಫೀಸಿನ ಮೆ ನೆಲ್ಲಮ್ಮಕ್ಕಳ ದೇವಯ್ಯನವರು ಮದ್ರಾಸು ಕ್ರಿಮಿನಲ್ ಜುಡಿಷ್ಯಲ್ ಟೆಸ್ಟ್‌ನಲ್ಲಿ ಪಾಸಾಗಿರುವರೆಂದು ತಿಳಿಯುತ್ತೇವೆ.

ಶನಿವಾರಸಂತೆನಾಡು ಸಹಕಾರಿ ಫುಟ್‌ಬಾಲ್ ಮಾರ್ಚಿ ತಾ. 3ರಲ್ಲಿ ಗುಡುಗಳಲೆ ಜಮೀದೇವ ಬಾಣೆಯಲ್ಲಿಯೂ, ಪೊನ್ನಂಪೇಟೆನಾಡು ಸಹಕಾರಿ ಸಮ್ಮೇಳನವು ತಾ. 7ರಲ್ಲಿ ಪೊನ್ನಂಪೇಟೆ ಶಾಲೆಯಲ್ಲೂ ನಡೆಯುವದೆಂದು ತಿಳಿಯುತ್ತೇವೆ.

ಮೈಸೂರಿನಿಂದ ಬಂದಿದ್ದ ವೇ. ರಾ. ರಾ ವಿದ್ವಾನ್ ಮಧುರ ಸುಂದರ ರಾಜಾಚಾರ್ಯರವರು ಈ ತಾ. 18ರ ಸಾಯಂಕಾಲ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ 'ತ್ರಿಮತ ವೇದಾಂತ'ವನ್ನು ಕುರಿತು ಬೋಧಪ್ರದವಾದ ಉಪನ್ಯಾಸ ಮಾಡಿದರು.

ಮಡಿಕೇರಿ ಮುಸ್ಲಿಂ ಯುವಕರ ಸಂಘದ ಆಶ್ರಯದಲ್ಲಿ ನಡೆಯಲಿಕ್ಕಿರುವ ಬ್ಯಾಡ್‌ಮಿಂಟನ್ ಟೂರ್ನಮೆಂಟು ಮಾರ್ಚಿ ತಾ. 12 ರಲ್ಲಿಯೂ, ಫುಟ್‌ಬಾಲ್ ಟೂರ್ನಮೆಂಟು ಮಾರ್ಚಿ ತಾ. 20 ರಲ್ಲಿಯೂ ಮಡಿಕೇರಿಯಲ್ಲಿ ಪ್ರಾರಂಭವಾಗುವದೆಂದು ತಿಳಿಯುತ್ತೇವೆ.

ಮದ್ರಾಸು ಪ್ರಾಂತ್ಯದ ಆರೋಗ್ಯ ಇಲಾಖೆಯ ಡೈರೆಕ್ಟರಾಗಿರುವ ಲೆಫ್ಟೆನೆಂಟ್ ಕರ್ನಲ್ ಕೋದಂಡ ಮೂರ್ ಗಣಪತ್ಯಯರು ಮಂಗಳೂರಿಗೆ ಹೋಗಿದ್ದಾಗ್ಗೆ ಈ ತಾ. 18 ಲ್ಲಿ ಅಲ್ಲಿಯ ಕೊಡವ ಸಮಾಜಗಳು ಅವರಿಗೊಂದು ಟೀ ಪಾರ್ಟಿಯನ್ನು ಕೊಟ್ಟು ಸತ್ಕರಿಸಿದರೆಂದು ತಿಳಿಯಬರುತ್ತದೆ.

ಕುಂಜಿಲ ಗ್ರಾಮದ ನಾಬಡನೂಡ ನೂಜವ್ವನೆಂಬ ವೃದ್ಧಾ ಸ್ತ್ರೀಯು ಈ ತಾ. 21ರಲ್ಲು ಶಿವರಾತ್ರಿಯಲ್ಲಿ ಭಾಗಮಂಡಲದಲ್ಲಿ ಪೊಲೀಸು ಲೈನಿನ ಒಳಿ ಅಕಸ್ಮಾತ್ತಾ ವೊಟ್ಟೆಯಿಂದ ಕಳಗೆ ಬಿದ್ದು ತೆಂಡೆ ಮುರಿದು ಹೋಗಿ ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರಾಗಿ ತಿಳಿಯಬರುತ್ತದೆ.

## ಹಿಂದೂ ದೇಶ.

ಈ ವರ್ಷದ ರೈಲ್ವೆ ಬಜೆಟ್ಟಿನಲ್ಲಿ 3½ ಕೋಟಿ ರೂಪಾಯಿಗಳ ನಷ್ಟ ಬಿದ್ದಿದೆ.

ಲಾಹೋರಿನಲ್ಲಿ ಮುಸಲ್ಮಾನರ ಸತ್ಯಾಗ್ರಹವು ನಡೆಯುತ್ತಿದೆ. ತಾ. 18 ರಲ್ಲಿ ಐದು ಮಂದಿಯ ದಸ್ತಗಿರಿಯಾಗಿದೆ.

ಇದೇ ಬರುವ ಜೂನ್ ತಿಂಗಳಲ್ಲಿ ಕೌನ್ಸಿಲ್ ಆಫ್ ಸ್ಟೇಟಿನ ಚುನಾವಣೆ ನಡೆಯುವುದು. ಚುನಾವಣೆಗಾಗಿ ಹೊಸ ನಿಧಾನಗಳೇನೂ ಏರ್ಪಡುವುದಿಲ್ಲ

ಗಾಂಧಿಜಿಯವರು ಲಕ್ನೊ ಕಾಂಗ್ರೆಸ್ಸಿಗೆ ದಯಮಾಡಿಸುವರೆಂದೂ, ಅವರೆ ರಾಜನೀತಿಯ ಕ್ಷೇತ್ರದಲ್ಲಿ ಪುನಹ ಪ್ರವೇಶಿಸುವ ಸಂಭವವಿಲ್ಲವೆಂದೂ ತಿಳಿದುಬರುತ್ತದೆ.

ಅಬಿಸೀನಿಯಕ್ಕೆ ಹೋಗಬೇಕೆಂದಿರುವ ಬೊಂಬಾಯಿಯ ರೆಡ್ ಕ್ರಾಸ್ ದಳದ ಸಮಿತಿಗೆ ಬೊಂಬಾಯಿ ಮೇಯರ್ ನರಿಮನ್ನರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದಾರೆ.

ದಿವಂಗತ ಲಾಲಾ ಲಜಪತರಾಯರಿಂದ ಹೊರಡಿಸಲಾದ ಲಾಹೋರಿನ 'ಪೀಪಲ್' ಎಂಬ ವಾರ ಪತ್ರಿಕೆ ಇದೇ ಮಾರ್ಚಿ ತಾರೀಕು 7ರಿಂದ ದಿನ ಪತ್ರಿಕೆಯಾಗುವುದೆಂದು ಪ್ರಕಟನವಾಗಿದೆ,

ಬಂಗಾಳದ ಕೂಲಿಗಾರರ ಮುಖಂಡರಾದ ಸೌಮ್ಯೇಂದ್ರನಾಥ ಠಾಕೂರರು ಅನರು ಕೊಟ್ಟ ಎರಡು ಭಾಷಣಗಳಿಗಾಗಿ ದಸ್ತಗಿರಿ ಮಾಡಲ್ಪಟ್ಟು ಅವರ ಮೇಲೆ ಚಾರ್ಜು ಆಗಿರುವುದು

ಕಾಂಗ್ರೆಸಿನ ಹಿಂದಿನ ಅಧ್ಯಕ್ಷರೂ, ಪ್ರಖ್ಯಾತ ಸಮಾಜದ ಸುಸ್ಸಸಿದ್ದ ಮುಖಂಡರೂ, ಕೌನ್ಸಿಲ್ ಆಫ್ ಸ್ಟೇಟಿನ ಸದಸ್ಯರೂ ಆಗಿದ್ದ ಸರ್ ಧಿನ್ಶಾವಾಚರು ತಮ್ಮ 91 ನೆಯ ವಯಸ್ಸಿನಲ್ಲಿ ತೀರಿಹೋದರು.

ಕಾಂಗ್ರೆಸಿನ ಸ್ವರ್ಣೋತ್ಸವದ ದಿನ ಧ್ವಜಾರೋಹಣ ಮಾಡಿದ ಸೂರ್ಯ ದೇವೇಂದ್ರ ಕುಮಾರ ರಾಯ ಎಂಬ ವಕೀಲರಿಗೆ ಅವರ ಕುಪಾಕಿಯ ಲೈಸನ್ಸನ್ನು ಯೂಕೆ ರದ್ದು ಮಾಡಬಾರದು ಎಂದು ಬಿಜಾವರ್ ಜಿಲ್ಲಾ ಮೇಜಿಸ್ಟ್ರೇಟರು ನೋಟೀಸು ಕೊಟ್ಟಿದ್ದಾರೆ.

ಶ್ರೀ ಜಿನ್ನಾರವರು ಷಾಹಿದ್‌ಗಂಜ್ ಗುರುದ್ವಾರದ ಸಂಬಂಧವಾದ ಜಗಳವನ್ನು ನಿಲ್ಲಿಸುವುದಕ್ಕೆ ಯತ್ನಿಸಿದರು. ಈ ವಾರದ ಅಂತ್ಯದೊಳಗಾಗಿ ಅವರು ಲಾಹೋರಿಗೆ ಹೋಗುವರು. ಮುಸಲ್ಮಾನರೇ ಅಲ್ಲದೆ ಹಿಂದೂಗಳೂ ಸಿಕ್ಖರೂ ಅವರನ್ನು ಬರಬೇಕೆಂದು ಪ್ರಾರ್ಥಿಸಿರುವಂತೆ

ಶ್ರೀಮತಿ ಸರೋಜಿನಿ ದೇವಿಯವರ ಆರೋಗ್ಯವು ಈಗ ನೆಟ್ಟಗಿಲ್ಲ. ದೇಹಲಿಯ ವಾಯುಗುಣವು ಅವರಿಗೆ ಉಕ್ತಮವೆಂದು ಡಾಕ್ಟರರ ಸಲಹೆಯ ಮೇಲೆ ಅವರು ದೇಹಲಿಗೆ ಹೋಗಿದ್ದಾರೆ. ಎಸೆಂಬ್ಲಿಯಲ್ಲಿ ಸಹ ಅವರು ಪ್ರೇಕ್ಷಕರಾಗಿ ನಡೆಯವ ಚರ್ಚೆಗಳನ್ನು ನೋಡುವರು.

ಸಂಯುಕ್ತ ಪ್ರಾಂತ್ಯಗಳ ಎಟಾವಾ ಜಿಲ್ಲಾ ಬೋರ್ಡಿನವರು ಹುಡಗಿಯರಿಗೆಲ್ಲಾ ಕಡ್ಡಾಯದ ಶಿಕ್ಷಣ ಪದ್ಧತಿಯನ್ನು ಜಾರಿಯಲ್ಲಿ ತಂದಿದ್ದಾರೆ. ಇದರಿಂದ 9 ರಿಂದ 11 ವರ್ಷದ ವರೆಗಿರುವ ಹಿಂದೂ, 5 ರಿಂದ 9ರ ವಳಗಿರುವ ಮುಸಲ್ಮಾನ ಬಾಲೆಯರೆಲ್ಲಾ ಶಾಲೆಗೆ ಹೋಗಬೇಕು.

ಬೊಂಬಾಯಿಯ ಮೆಡಿಕಲ್ ಯೂನಿಯನ್ನಿನವರು ಜರ್ಮನ ವಸ್ತುಗಳನ್ನು, ಮುಖ್ಯವಾಗಿ ವೈದ್ಯಕೀಯ ಸಾಮಗ್ರಿಗಳನ್ನು ಒಹಿಷ್ಕರಿಸಬೇಕಾಗಿ ಜನತೆಗೆ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಮ್ಯೂನಿಚ್ ನಗರದಲ್ಲಿ ಹಿಟ್ಲರು ಹಿಂದು ಸ್ಥಾನದವನನ್ನು ನಿಂದಿಸಿ ಮಾತಾಡಿದ್ದಕ್ಕಾಗಿ ಈ ಬಹಿಷ್ಕಾರ.

ಬೊಂಬಾಯಿಯ ಸ್ಪಿನ್ನಿಂಗ್ ಮಿಲ್ಸ್‌ನ 5500 ಮಂದಿ ಕೆಲಸಗಾರರು ಕೆಲಸ ಮಾಡಲು ಮುಷ್ಕರ ಹಿಡಿದಿದ್ದಾರೆ. ಕಾರಣವು ಹೀಗಿದೆ—ಎಂದಿನ ಪ್ರತಿ ಕೆಲಸಗಾರನೂ ಎರಡು ಮಿಷನ್ ಮಗ್ಗಗಳನ್ನು ನಡೆಸುತ್ತಿದ್ದನು. ಈಗ ಗಿರಣಿಯ ಮೂಲೀಕರು ಹೊಸ ತಾಹವ ಮಿಷನ್ ಮಗ್ಗಗಳನ್ನು ತರಿಸಿ 4 ಮಗ್ಗಗಳಿಗೆ ಒಬ್ಬ ಕೆಲಸಗಾರನಂತೆ ನಿಯಮಿಸಲು ಕೆಲಸಗಾರರು ಇದಕ್ಕೆ ಒಪ್ಪಲಿಲ್ಲ.

ಅರಿಯಲ್ಟಾನ್ ನದಿಯಲ್ಲಿ ಪಯಣಿಸುತ್ತಿದ್ದ ಮೂರು ಮೋಟಾರ್ ದೋಣಿಯಲ್ಲಿ 40 ಮಂದಿ ಪ್ರಯಾಣಕರಿದ್ದರು. ಪೊಲೀಸರ ಡ್ರೆಸ್ಸಿನಲ್ಲಿ ಒಂದು ಡಜನ್ ಡಕಾಯಿತರು ದೋಣಿಯನ್ನು ಪ್ರವೇಶಿಸಿ ಪ್ರಯಾಣಿಕರ ವಸ್ತುಗಳನ್ನೂ ಜಪ್ತಿ ಮಾಡಿದರು ಕೊನೆಗೆ ಸುಮಾರು ರೂ. 400 ಬೆಲೆಬಾಳುವ ವಸ್ತುಗಳನ್ನೂ ಹಿಡಿದುಕೊಂಡು ಓಡಿದರು. ಡಕಾಯಿತರು ಕತ್ತಿ ಪಿಸ್ತೂಲುಗಳನ್ನು ಧರಿಸಿದ್ದರು.

ಪಂಡಿತ ಮಾಳವಿಯರವರು ಕಾಶಿಯಲ್ಲಿ ಶಿವರಾತ್ರಿ ಸಂಬಂಧ ಧರ್ಮಿಕ ಉಪನ್ಯಾಸ ಕೊಡುತ್ತಿದ್ದ ಹಾಗೆ ಅವನ್ನು ತಡೆಗಟ್ಟಲು ನಾನಾ ಪ್ರಯತ್ನಗಳು ನಡೆದುದಲ್ಲದೆ, ನೂರಾರು ಶರು ಭಾಷಣ ಕೊಟ್ಟು ಹಿಂದಿರುಗುವಾಗ ಯಾರೋ ಅವರ ಕೈಯ್ಯನ್ನೂ ಹಿಡಿದೆಳೆದು ಪುಂಡಾಟ ನಡಿಸಿದರು. ಇಷ್ಟಕ್ಕೆಲ್ಲ ಕಾರಣ ಅವರು ಹರಿಜನರಿಗೆ ಹೆಚ್ಚಿನ ಹಕ್ಕು ಬಾಧ್ಯತೆಗಳು ಸಿಕ್ಕಬೇಕೆಂದು ಒತ್ತಾಯಪಡಿಸುತ್ತಿದ್ದುದೇ.

ಬೀರಾರ್ ಪ್ರಾಂತ್ಯಕ್ಕೆ ಸೇರಿದ ಮುಜಾಫರ್ ಪೂರ್, ಪೂರ್ನಿಯ, ಭಾಗಲ್ ಪೂರ್, ಪಾಟ್ನಾ, ಈ ಊರುಗಳಲ್ಲಿಯೂ ಕಾಶೀ ಪಟ್ಟಣದಲ್ಲಿಯೂ ಕಳೆದ ತಾ 10ನೇ ಮಂಗಳವಾರ ಬೆಳಿಗ್ಯೆ ಒಂದೆರಡು ಸೆಕೆಂಡುಗಳು ಭೂಕಂಪವಾಯಿತೆಂದೂ, ಜನರು ಮನೆಗಳಿಂದ ಹೊರಕ್ಕೆ ಓಡಿ ಹೋಗಲು ಪ್ರಯತ್ನಪಟ್ಟಾಗ ಕೆಲವರಿಗೆ ಅಲ್ಪಸ್ವಲ್ಪ ಗಾಯವಾದುದಲ್ಲದೆ ಪ್ರಾಣಾಪಾಯವೇನೂ ಆಗಿಲ್ಲವೆಂದೂ ಪ್ರಕಟನವಾಗಿದೆ.

ಮದರಾಸು ಸರ್ಕಾರದ ಮುಖ್ಯ ಮಂತ್ರಿಗಳಾದ ಬೊಬ್ಬಿಲಿ ಮಹಾರಾಜರವರು ಡಾ. ರವೀಂದ್ರನಾಥ ಟಾಗೋರ್ ರವರ ವಿಶ್ವ ಭಾರತೀ ಎಂಬ ವಿಶ್ವವಿದ್ಯಾನಿಲಯದ ಫಂಡಿಗೆ 2,000 ರೂಪಾಯಿ ಚಂದಾ ಕೊಟ್ಟಿರುತ್ತಾರೆ.

ಅಗೊಸ್ತು ತಿಂಗಳಲ್ಲಿ ಲಕ್ನೋದಲ್ಲಿ ನೆಡೆಯುವ ಅಖಿಲ ಭಾರತ ವಿದ್ಯಾರ್ಥಿಗಳ ಸಭೆಗೆ ವಿದ್ಯಾರ್ಥಿಗಳು ಭರದಿಂದ ನಡೆಯುತ್ತಿವೆ. ಪಂಡಿತ ಮಾಳವೀಯರವರು ಸ್ವಾಗತ ಮಂಡಳಿಯ ಅಧ್ಯಕ್ಷರಾಗಿ ಚುನಾಯಿಸಲ್ಪಡುವರೆಂದು ನಂಬಲಾಗಿದೆ, ವಿಶ್ವವಿದ್ಯಾನಿಲಯಗಳು ಸಹ ಇವರೊಡನೆ ಸಹಕರಿಸಲೆಂದು ಇಂಟರ್ ಯೂನಿವರ್ಸಿಟಿ ಬೋರ್ಡಿಗೆ ಈ ಸಭೆಯ ಕಾರ್ಯದರ್ಶಿಗಳು ಬರೆದಿದ್ದಾರೆ. ಸರ್. ಪಿ. ಸಿ ರಾಯ್‌ರವರು ಅಧ್ಯಕ್ಷರಾಗಬಹುದು.

ಕಾಂಗ್ರೆಸ್ಸಿನವರು ಅಧಿಕಾರವನ್ನು ಸ್ವೀಕರಿಸಬಾರದೆಂಬ ಪ್ರಬಲ ಜನಮತವನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಲು ನೂರಿತಾ. 8ನೇ ಆದಿತ್ಯವಾರ ದೇಶವೆಲ್ಲೆಲ್ಲಾ ವಿನಿಸ್ಟರರ ವಿರುದ್ಧವಾದ ದಿನಾಚರಣೆಯು ನಡೆಯುತಕ್ಕದ್ದೆಂದೂ, ಕಾಂಗ್ರೆಸ್ ನುಂದಿನ ಕಾರ್ಯಕ್ರಮವನ್ನು, ಸಾರ್ವಜನಿಕ ಸಭೆ ಭಾಷಣಗಳೂ ಆಗಲೇ ಜರುಗತಕ್ಕದ್ದೆಂದೂ ಪಾಟ್ನಾದ ಸರ್ದಾರ್ ಸಾರ್ದೂಲ್ ಸಿಂಗ್, ಎಐ ಶಾಫಿ ಅಸೆಂಬ್ಲಿದ ಕಿಡ್ವಯ್, ಎಂಬವರನ್ನು ಮೊದಲಾದವರು ನಿಷ್ಕರ್ಷಿಸಿರುವರು.

ಬೆನಾರಿಸಿನ ಟವುನ್ ಹಾಲ್ ಮೈದಾನದಲ್ಲಿ ಲೀಲಾಧರ ಶರ್ಮ ಎಂಬ ಯುವಕನು 91 ಗಂಟೆಯ ವರೆಗೆ ಜಾದೂ ಸವನೆ ನಡೆದು ಪ್ರಪಂಚದ ರಿಕಾರ್ಡನ್ನು ನೂಡಿದ್ದಾನೆ ನಡೆಗೆಯ ಪ್ರಾರಂಭವು ಒಂದು ಭಾನವಾರ ಬೆಳಿಗ್ಯೆ ಪಂಡಿತ ಸಂಪೂರ್ಣಾನಂದರಿರಿರುಗಾಗಿ. ನಾಗರಿಕ ಮಂಡಲದ ಅಧ್ಯಕ್ಷರಾದ ಶ್ರೀ ಪರದಾಕರರ ಎದುರಿನಲ್ಲಿ ಬುಧವಾರ ರಾತ್ರಿ ಗಂಟೆಗೆ ನಿಂತಿತು. ಗುರುವಾರ ಮಧ್ಯಾಹ್ನ ಲೀಲೆಧರನ ಉತ್ಸನವು ಸಾವಿರಾರು ಜನರೀದೊಡಗೂಡಿ ಬೆನಾರಸಿನ ನಾನಾ ರಾಜ ಮಾರ್ಗಗಳಲ್ಲಿ ನಡೆಯಿತು.

ಕರಾಚಿಗೆ ಸೇರಿದ ಟಟ್ಟಾ ಎಂಬ ಊರಿನ ಮುನ್ಸಿಪಲ್ ಸಭೆಯಲ್ಲಿ ಹಿಂದೂಗಳಾವ ಹನುದೀಯರೂ ಒಟ್ಟು 26 ಮಂದಿ ಕವುನ್ಸಿಲರುಗಳಿದ್ದಾರೆ. ಈ ವರ್ಷ ಕವುನ್ಸಿಲ್ ಮೆಂಬರುಗಳ ಚುನಾವಣೆ ನಡೆದಾಗ ಹಿಂದೆ ಇದ್ದ ಮೆಂಬರುಗಳಿಗೆ ಯಾರೂ ಪ್ರತಿಸ್ಪರ್ಧಿಗಳಾಗಿ ನಿಂತುಕೊಳ್ಳಲಿಲ್ಲವಾಗಿ 26 ಜನರೂ ನುತ್ತೆ ನೇಮಕವಾಗಿರುತ್ತಾರೆ. ಮುನ್ಸಿಪಾಲಿಟಿಗೆ ಈ ಸಾರಿ ಚುನಾವಣೆಗಾಗಿ ಒಂದು ಕಾಸೂ ಖರ್ಚಾಗಲಿಲ್ಲವೆಂದು ಹೇಳಲಾಗಿದೆ,

ಮೆ. ಕಿಷೋರಿ ಮೋಹನ್ ಮುಜಮುದಾರ್ ಎಂಬಾತನು ಬಂಗಾಳಿ ವಂಶಸ್ಥನು. ಈತನ ಸಹೋದರರು ಭಾರೀ ಸರ್ಕಾರಿ ಉದ್ಯೋಗಗಳಲ್ಲಿ ಇದ್ದವರು. ಈತನಿಗೆ 11 ಮಂದಿ ಹೆಂಣ ಮಕ್ಕಳು. ಅವುಲ್ಲಿ ಐದು ಜನರಿಗೆ ವಿವಾಹವಾಗಿದೆ. ಉಳಿದವರೆಲ್ಲರೂ ವಿವಾಹ ವಯಸ್ಕರಾಗಿದ್ದರು. ಮನೆತನದ ಹೆಸರನ್ನು ನೋಡಿ ಈತನ ಮನೆಯ ಹೆಂಣನ್ನು ವಿವಾಹ ಮಾಡಿಕೊಳ್ಳಲು ಗುಡಿನವರು ಭಾರೀ ಮಡಕ್ಷಿಣೆ ಕೇಳುತ್ತಿದ್ದರು. ಈತನಿಗೆ ಕೊಡಲು ಧೈರ್ಯವಿಲ್ಲ. ಹಣ ಕೊಡದಿದ್ದಲ್ಲಿ ವಿವಾಹ ನಡೆಯವ ಹಾಗಿಲ್ಲ. ಇಂಥಾ ಕಷ್ಟ ಸ್ಥಿತಿಗೆ ಸಿಕ್ಕಿಬಿದ್ದ ತಂದೆಯನ್ನು ನೋಡಿ ಆತನ ನಾಲ್ಕು ಹೆಂಣು ಮಕ್ಕಳು ತಂದೆಯ ಚಿಂತೆಯನ್ನು ನೀಗಿಸಬೇಕೆಂದು ನಿಶ್ಚಯಿಸಿ ಅಪಿಮನ್ನು ವಿಶೇಷವಾಗಿ ಸೇವಿಸಿ ಆತ್ಮ ಹತ್ಯ ಮಾಡಿಕೊಳ್ಳಲು ಪ್ರಯತ್ನಪಟ್ಟರು. ಅವರ ಪೈಕಿ ಒಬ್ಬಳು ವಿನಹ ಮಿಕ್ಕವರು ನುಂದಿ ತೀರಿ ಹೋಗಿರುತ್ತಾರೆ.

## ವಿದೇಶ.

1935ರಲ್ಲಿ ಬ್ರಿಟನಿಗೆ 37 ಮಿಲ್ಯ ಪೌಂಡುಗಳ ಆದಾಯವು ವ್ಯಾಪಾರದಲ್ಲಿ ದೊರಕಿದೆ 1930ರಿಂದ ಇಷ್ಟು ಲಾಭ ದೊರಕಿರಲಿಲ್ಲ

ಸಾರ್ವಭೌಮರ ಪಟ್ಟಾಭಿಷೇಕಕ್ಕಾಗಿ ವಿಧಾನಗಳನ್ನು ನಡೆಸುವ ಸಮಯವು ಯಾವುದೆಂದು ಪ್ರಕಟಿಸುವ ಸಮಯವಿನ್ನೂ ನಿರ್ಧಾರವಿಲ್ಲವೆಂದೂ ಪ್ರಧಾನರು ನಿರ್ಧಾನವಾಗಿ ಕಾಮನ್ಸ್ ಮಂದಿರದಲ್ಲಿ ನುಡಿದರು.

ಸ್ಪೈನ್ ದೇಶದ ಹಳೇ ಸರ್ಕಾರ ರಾಜೀನಾಮೆ ಕೊಟ್ಟಿದೆ. ಅಜ್ಞಾರವರು 11 ಮಂದಿಯ ಹೊಸ ಮಂತ್ರಿ ಮಂಡಲವನ್ನು ರಚನೆ ಮಾಡಿದ್ದಾರೆ. ಅವರಲ್ಲಿ ಇಪ್ಪತ್ತು ಹಳೆಯ ಮಂತ್ರಿಗಳೇ. ಯಾವತ್ತೂ ರಾಜಕೀಯ ಬಂಧಿಗಳಿಗೆ ಎಡುಗಡೆ; ಕಳೆದ ವರ್ಷದ ದಂಗೆಯಲ್ಲಿ ಉದ್ಯೋಗ ಕಳೆದುಕೊಂಡವರಿಗೆ ಉದ್ಯೋಗ ವಿಸ್ತಾರ—ಇದೀಗ ಹೊಸ ಮಂತ್ರಿ ಮಂತ್ರಿ ಮಂಡಲದ ವರ ಪ್ರಸಾದ.

ಸಾನ್ ಫ್ರಾನ್ಸಿಸ್ಕೋವಿನಿಂದ ವಿಚಿತ್ರ ವರ್ತಮಾನ. ವಿಸ್ ಎನ್ನಾ ಹನಿಟ್ ಎಂಬ ಒಬ್ಬಾಕೆ ಯುವತಿ. ಮೃತನಾದ ಆಕೆಯ ತಂದೆ ಶ್ರೀಮಂತ. ಆತನು ಎನ್ನಾಳಿಗೆ ಮದುವೆಯಾಗಿ ಮಕ್ಕಳಾದರೆ ಆ ಮಗುವಿಗೆ 20 ಲಕ್ಷ ಪೌಂಡುಗಳೆಂದು ವಿಲ್ ಬರೆಯಿಟ್ಟಿದ್ದ. ಇದರ ಪ್ರಯತ್ನದ ಮಗಳಿಗೆ ದೊರಕಬಾರದೆಂದು ಆಕೆಯ ತಾಯಿ ಇಬ್ಬರು ಡಾಕ್ಟರರ ಮೂಲಕ ಶಸ್ತ್ರ ಚಿಕಿತ್ಸೆ ನಡೆಸಿ ಎನ್ನಳನ್ನು ನಪುಂಸಕಳನ್ನಾಗಿ ಮಾಡಿರು

ವಳೆದು ಎನ್ನಳ ದೂರು ಕೋರ್ಟಿನಲ್ಲಿ. ವಿಚಾರ ನಡೆಯುತ್ತಿದೆ.

ತಾ. 26 ರಲ್ಲಿ ಜಪಾನಿನ ಮುಖ್ಯ ಪಟ್ಟಣವಾದ ಟೊಕ್ಕಿಯೋದಲ್ಲಿ ಒಂದು ದಂಗೆಯಾಗಿದೆ. ದಂಗೆಗಾರರು ಜಪಾನಿನ ಪ್ರಧಾನ ಮಂತ್ರಿಗಳಾದ ಮೆ. ಓಕಾಡರವರನ್ನೂ ಫೈನಾನ್ಸ್ ಮಂತ್ರಿಗಳಾದ ಟಾಕಹಾಷಿ ಮತ್ತು ಅಡ್ಮಿರಲ್ ಸೈಟೋ ಎಂಬ ಮುಖ್ಯಾಧಿಕಾರಿಗಳನ್ನು ಕೊಲೆ ಮಾಡಿರುವರಲ್ಲದೆ ಅನೇಕ ಮುಖ್ಯಾಧಿಕಾರಿಗಳನ್ನು ಕೊಲೆ ಮಾಡಲು ಪ್ರಯತ್ನಿಸಿರುವರು. ಅಲ್ಲಿನ ಪರಿಸ್ಥಿತಿಯು ಅತ್ಯಂತ ಭೀಕರವಾಗಿದೆ ಜನರು ಕಂಗೆಟ್ಟಿರುವರು 'ಮಷರ್ಷಲ್ ಲಾ' ಜಾರಿಗೆ ತರಲಾಗಿದೆ.

ಕಳೆದ ವಾರ ಜಪಾನಿನ ಡಯಟಿಗೆ (ಪಾರ್ಲಿಮೆಂಟಿಗೆ) ಮೆಂಬರುಗಳ ಚುನಾವಣೆಗಳು ನಡೆದವು. ಈ ಚುನಾವಣೆಯಿಂದ ಅಳ್ವಿಕೆಯನ್ನು ವಹಿಸಿರುವ ಸರ್ಕಾರವೇನೂ ಬದಲಾವಣೆಯಾಗುವುದಿಲ್ಲ. ಮುಖ್ಯರಾಷ್ಟ್ರಗಳಾದ ಓಕಡೆಯವರಕಕ್ಷಿಯವರಿಗೆ ಹಿಂದಿಗಿಂತಲೂ ವಿಶೇಷ ಪ್ರಾತಿನಿಧ್ಯಗಳು ದೊರೆತಿವೆ. ಆ ದೇಶವು ಏಲಿಬರಿ ಕಕ್ಷಿಯವರನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಮುಖ್ಯಮಂತ್ರಿಗಳಿಗೂ ಪರರಾಜ್ಯಗಳ ಮಂತ್ರಿಯೂದ ಮಿ. ಹೀರೋಟಾಯವರಿಗೂ ಬಹಳ ಶ್ರಮವಾದ ಕೆಲಸವೆಂದು ಹೇಳಬೇಕಾಗಿದೆ ಈ ಚುನಾವಣೆಗಳ ಫಲಿತಾಂಶವಾಗಿ ಈ ಏಲಿಬರಿ ಕಕ್ಷಿಗೆ ಕೆಲವು ಸ್ಥಾನಗಳು ಕಟ್ಟಿದವು

ಬುಲ್ಗೇರಿಯಾ ರಾಜ್ಯದಲ್ಲಿ ಮೊ. ವೆಲ್ಚ್‌ಚೆಫ್‌ನನ್ನೂ, ಸ್ವಮೇಕನಾದ ಮತ್ತೊಬ್ಬ ರಾಜಕೀಯ ಕಾರ್ಯಕರ್ತನನ್ನೂ ಗಲ್ಲಿಗೆ ಹಾಕಬೇಕೆಂದು ಹುಕುಂ ಆಗಿದೆ ಇನ್ನೂ ಅನೇಕರಿಗೆ ನಾನಾ ರೀತಿಯ ಶಿಕ್ಷೆಗಳು ವಿಧಿಸಲಾಗಿವೆ ಅಳ್ವಿಕೆಯ ಸೂತ್ರವನ್ನು ವಹಿಸಿ ನಡಿಸುತ್ತಿದ್ದ ಸರ್ಕಾರವನ್ನು ತಲೆಕೆಳಗು ಮಾಡಬೇಕೆಂದು ಮೇಲ್ಕಂಡವರು ಉದ್ದೇಶಪಟ್ಟರೆಂಬುದೇ ಅವರ ಅಪರಾಧ. ಮೆ. ವೆಲ್ಚ್‌ಚೆಫ್ ಎಂಬಾತನು ಬಾದಾವತ್ತಿ ಬುಲ್ಗೇರಿಯದ ಮುಖ್ಯ ಮಂತ್ರಿಯಾಗಿದ್ದನು. ಈತನಾದರೋ ಬುಲ್ಗೇರಿಯಾ ರಾಜ್ಯವು ಯಾಗೋ-ಸ್ಲಾವಿಯಾ ರಾಜ್ಯದೊಡನೆ ಸ್ನೇಹ ಬೆಳಸಬೇಕೆಂಬ ಅಭಿಮತ ಪಡೆದಿರುವ ಕಕ್ಷಿಯ ಮುಖಂಡನು. ಸರ್ಕಾರಿ ಕಕ್ಷಿಯವರಾದರೋ ಇವರಿಬ್ಬರ ರೊಡನೆ ಸಖ್ಯ ಬೆಳಸಬೇಕೆಂಬ ಅಸೆಯುಳ್ಳವರಾಗಿದ್ದಾರೆ.

ವ್ಯೋಮ್ಯಕೂವೊ-ಸೈಬೀರಿಯಾ ಗತಿನಿಯಂತ್ರಣ ಈಜೆಗೆ ಜಪಾನಿನವರಿಗೂ ರಷ್ಯಾದವರಿಗೂ ಕಮನಬಾವಿ ತಕ್ಕೆ ಈ ವಿಷಯದಲ್ಲಿ ಕೂಲಂಕಷವಾದ ವಿಚಾರಣೆ ನಡೆಯುವುದಕ್ಕೆ ಇಂಥಾ ಸಂಘರ್ಷಣೆಗಳು ಪ್ರಾಪ್ತವಾಗದಂತೆ ಎಲ್ಲೆಕಟ್ಟನ್ನು ಗೊತ್ತುಮಾಡುವುದಕ್ಕಾಗಿ ಒಂದು ಪಂಚಾಯತಿನ್ನು ಏರ್ಪಡಿಸಿ, ಆ ಪಂಚಾಯತಿಯಲ್ಲಿ ಮೇಲ್ಕಂಡ ಎರಡು ಕಕ್ಷಿಯವರ ಪ್ರತಿನಿಧಿಗಳಲ್ಲದೆ ಈ ಎರಡು ರಾಜ್ಯಗಳಿಗೂ ಸಂಬಂಧಪಡದ ಮೂರನೆಯವರೊಬ್ಬರಿರಬೇಕೆಂದು ರಷ್ಯಾದವರು ಸೂಚಿಸಿದರು. ಸದ್ಯದ ವಿಚಾರಕ್ಕೆ ಮತ್ತು ರಾಜ್ಯದವರು ಇದಕೂಡದೆಂಬುದು ಜಪಾನಿನವರ ಆಕ್ಷೇಪಣೆ. ರಷ್ಯಾ ಸರ್ಕಾರದವರಾದರೋ ಈಜೆಗೆ ಈ ಆಕ್ಷೇಪಣೆಯನ್ನು ಪುರಸ್ಕರಿಸುತ್ತಾರೆ. ಉಳಿದ ಎಲ್ಲೆಕಟ್ಟುಗಳನ್ನು ವಿಗಡಿಸಿ ಗೊತ್ತುಮಾಡುವುದಕ್ಕೆ ಈ ಉಭಯ ರಾಜ್ಯಗಳ ಪ್ರತಿನಿಧಿಗಳ ಕೂಡ ಸಂರಾಜ್ಯಗಳ ಒಬ್ಬ ಪ್ರತಿನಿಧಿಯೂ ಕಲೆತು ತನಿಖೆಮಾಡುವ ವ್ಯವಸ್ಥೆಮಾಡುವುದು ಸೂಕ್ತವೆಂಬ ಅಭಿಪ್ರಾಯವನ್ನು ರಷ್ಯಾದವರು ಜಪಾನ್‌ನವರಿಗೆ ತಿಳಿಸಿರುತ್ತಾರೆ.

# ಯುದ್ಧ ವಾರ್ತೆ.

### ಫೆಬ್ರವರಿ ತಾ. 19.

ಚಕ್ರವರ್ತಿಗಳನ್ನು ಕೊಲ್ಲಲು ಒಳಸಂಚು.

ಅಬಿಸೀನಿಯಾ ಚಕ್ರವರ್ತಿಗಳನ್ನು ಕೊಲ್ಲಲು ಇಟಲಿಯ ವರಿಂದ ಪ್ರೇರಿತರಾದ ಗಣ್ಯಾಧಿಕಾರಿಗಳು ಒಳಸಂಚು ನಡೆಸಿತ್ತಿರುವರು. ಚಕ್ರವರ್ತಿಗಳ ವಿವಾಹದ ಎಣ್ಣೆಯೆಳಗೆ ಮಾರಳು ತಂದಿಟ್ಟು ಯುತ್ಯಗಳನ್ನು ಸಡಲಿಸಿ ಆಕಾಶದಿಂದ ಅಕಸ್ಮಾತ್ ಬಿದ್ದು ಹೋಗುವಂತೆ ಏರ್ಪಾಡು ಮಾಡಿದ್ದು ದೈವಾನುಗ್ರಹದಿಂದ ವಿವಾಹದ ನಿರ್ವಹಣೆಯಲ್ಲೇ ಗೊತ್ತುಹತ್ತಲ್ಪಟ್ಟಿತು.

### ಫೆಬ್ರವರಿ ತಾ. 20.

ಎಂಡೆರ್ಟ್‌ದಲ್ಲಿ ಯುದ್ಧ.

ಟೊದಿಯನ್ ಪ್ರಾಂತದಲ್ಲಿ ಎಂಡೆರ್ಟ್‌ದ ಬಳಿ ಯುದ್ಧವು ನಡೆಯುತ್ತಾ ಇದೆ ಅಬಿಸೀನಿಯಾ ಸೈನಿಕರು ಹಗಲೆಲ್ಲ ಗುಹೆ ಮತ್ತು ಜರಾಯಿಗಳಲ್ಲಿ ಅವಿತು ರಾತ್ರಿ ಇಟಲಿಯವರ ಮೇಲೆ ಬೀಳುತ್ತಿರುವರು. ಹಾಗೂ ಯುದ್ಧವು ನಡೆಯುತ್ತಲೇ ಇದೆ.

### ಫೆಬ್ರವರಿ ತಾ. 21.

ಎಂಡೆರ್ಟ ಯುದ್ಧ.

ಫೆಬ್ರವರಿ ತಾ. 12 ರಿಂದಲೇ ಪ್ರಾರಂಭವಾದ ಎಂಡೆರ್ಟ ಯುದ್ಧವು ಇನ್ನೂ ಮುಂದುವರಿಯುತ್ತಲೇ ಇದೆ. ಇಟಲಿಯವರು ಬೌರಿ ಕವಚವನ್ನು ಸಿದ್ಧತೆಯಲ್ಲಿರುವರು. ರಾಸ್ ಮುಲುಗೆಟಾರವರೇ ಅಬಿಸೀನಿಯಾದ ಕಡೆ ನಾಯಕರು. ಅವರು ತಮ್ಮ ಚಾತುರ್ಯದಿಂದ ಇಟಲಿಯವರನ್ನು ಮುಗ್ಗಟ್ಟಿಗೊಳಿಸಿರುವರು. ಈ ವರೆಗೆ ಈ ಯುದ್ಧದಲ್ಲಿ 147 ಅಬಿಸೀನಿಯರು ಮಡಿದಿರುವೆಂದೂ 268 ಮುಂದಿ ಘಾಯಗೊಂಡಿರುವರೆಂದೂ ತಿಳಿಯಬಂದಿದೆ

ರಣರಂಗದಿಂದ ಹಿಂತಿರುಗಿದವರಿಗೆ ಶಿಕ್ಷೆ.

ಉತ್ತರ ರಣಾಂಗಣದಿಂದ ಮನೆಗೆ ಹಿಂತಿರುಗಿ ಬಂದ ಒಂಭತ್ತು ಇತ್ಯೋಪಿಯ ಸೈನಿಕರಿಗೆ ಅಡಿಸ್ ಅಬಾಬದಲ್ಲಿ ಪಬ್ಲಿಕ್ ಸ್ಥಳದಲ್ಲಿ ಕಂಬಕ್ಕೆ ಬಿಗಿದು ದೊಡ್ಡ ಕೊರಡಿನಿಂದ ಜಡಿಯುವ ಹೊಡೆತವನ್ನು ಕೊಡಲಾಯಿತು.

1500 ಎಟ್ರಿಯನ್ ಸೈನಿಕರು ಅಬಿಸೀನಿಯಾದ ಪಕ್ಷಕ್ಕೆ.

ತಾ. 16 ನೇ ರಾತ್ರಿ ಇಟಲಿಯ ಪಾಳ್ಯದಿಂದ 1500 ಮಂದಿ ಎಟ್ರಿಯನ್ ಸೈನಿಕರು ತಮ್ಮ ಆಯುಧಗಳೊಡನೆ ಅಬಿಸೀನಿಯಾದ ಪಕ್ಷ ವಹಿಸಿರುವರೆಂದು ರಾಸ್ ಮುಲುಗೆಟಾರವರ ಪ್ರಕಟಣೆ.

ಫೈನಿಯಲ್ಲಿ ಇಟಲಿಯವರ ಆಕ್ರಮಣ.

ಈ ಫೈನಿಯ ತಾ. 15 ರಿಂದ ಈಚೆಗೆ 725 ಕ್ಕೆ ವೈಮಾನಿಕ ಬಾಂಬುಗಳಿಂದ ಬೇಕಾಬಿಟ್ಟಿ ಇಟಲಿಯವರು ಆಕ್ರಮಣ ಮಾಡಿರುವರು ಎಂದು ತಿಳಿಯುವಂತೆ ಓಗಾಡೆನ್ ಪ್ರಾಂತದಲ್ಲಿ ವಿಶೇಷ ಯುದ್ಧ ಪ್ರಾರಂಭವಾಗಿದೆ.

### ಫೆಬ್ರವರಿ ತಾ. 24

ಇಟಾಲಿಯನ್ನರನ್ನು ಸತ್ಕರಿಸಿದರು.

ಅಕ್ಸಂ ಬಳಿ ರಾಸ್ ಇಮ್ಮಿರರು ಸೈನ್ಯದ ಬಳಿಯೊಂದು ಇಟಾಲಿಯನ್ ಪಾಳ್ಯದ ಮೇಲೆ ಹಠಾತ್ತಾಗಿ ಏಳ್ದು ಕಿತ್ತಾಟ ಬಿಟ್ಟು 400 ಸೈನಿಕರನ್ನು ಕೊಂದಿರುವರಲ್ಲದೆ ಇನ್ನೂ ಹೆಚ್ಚಿನ ಸಂಖ್ಯೆಯನ್ನು ಘಾಯಗೊಳಿಸಿರುವರು. ಇಟಾಲಿಯನ್ನರು ಹಿಂದರಿ ಓಡುವ ಅವಸರದಲ್ಲಿ ಶತ್ರುಗಳ ಕೈ ಸೇರುವೆವೆಂಬ ಭಯದಿಂದ ಬಹಾಬುಗಳಿಂದ ತುಂಬಿದ 16 ಗುತಿಸಲುಗಳನ್ನೂ 32 ಲಾರಿಗಳನ್ನೂ ಸುಟ್ಟು ಓತಿದರು.

ಅಬಿಸೀನಿಯಾಕ್ಕೆ ಅಪರಿಮಿತ ಆಯುಧಗಳು.

ಒರಬೆರಾ ಎಂಬ ಬಂದರಿನಲ್ಲಿ ಸುಮಾರು 500 ಟನ್ನು ಯುದ್ಧ ಸಾಮಗ್ರಿಗಳು ಬಂದು ಇಳಿದಿವೆ ಅಲ್ಲದೆ 30 ಟ್ರಾಂಕ್‌ಗಳನ್ನು ಗುಂಡು ಹೊಡೆಯಲಿರುವ ಕೋವಿಗಳೂ 6 ಆಟೋ ಮೇಟಿಕ್ ಕೋವಿಗಳೂ 10,000 ಮಾರಕ ಶೈಫುಗಳೂ, 1,2000 ಹೊಸ ಸನ್ನಾಹನೆಯ ಶೈಫುಗಳೂ 15,000 ಕೋಟಾಗಳೂ ಬಂದು ಇಳಿದಿವೆ. ಈ ಸಾಮಗ್ರಿಗಳನ್ನು ಲಾರಿಗಳಲ್ಲಿ ತೀಘ್ರವಾಗಿ ಸಾಗಿಸುತ್ತಲಿರುವರು.

### ಫೆಬ್ರವರಿ. ತಾ. 25.

ಎರಿಟ್ರಿಯಾದಲ್ಲಿ ಯುದ್ಧ.

ಅಬಿಸೀನಿಯರು ಈಗ ಎಟ್ರಿಯಾಕ್ಕೆ ಯುದ್ಧವನ್ನು ಮುಂದರಿಸಿರುವರು. ತಾ. 19 ರಲ್ಲಿ ಇಟಲಿಯ ತೃತೀಯ ಸೈನ್ಯವಾದ ಓಮ ಆರ್ ಎಂಬಲ್ಲಿ ರಾಸ್ ಇಮ್ಮಿರನ ಸೈನ್ಯದಳವು ಅನೇಕ ಸಾವಿರ ಸೈನಿಕರ ಉಡುಪುಗಳನ್ನೂ ಮತ್ತು ಯುದ್ಧ ಸಾಮಗ್ರಿಗಳನ್ನು ಕೈವಶಮಾಡಿದರು. ಅಲ್ಲದೆ ವಾಲಕ್ಕಿಯಿಟ್' ಎಂಬಲ್ಲಿ ಇಂದು ಇಟಲಿಯ ವಿಮಾನವು ಕೆಳಕ್ಕೆ ಕೆಡವಲ್ಪಟ್ಟಿತು. ಒಟ್ಟು 412 ಇಟಲಿ ಸೈನಿಕರು ಹತರಾದರೆಂದೂ, ಅಬಿಸೀನಿಯಾ ಸೈನಿಕರಲ್ಲಿ 50 ಮಂದಿ ಮೃತರಾದರು, 101 ಮಂದಿ ಘಾಯಗೊಂಡಿರುವರೆಂದೂ ಈಜೆಗೆ ತಿಳಿಯಬಂದಿದೆ. ಅದೇ ದಿನ ಅಡೆಕೀತದ ಬಳಿ ಮತ್ತೊಂದು ದಳವು ಇಟಲಿಯವರ ಮೇಲೆ ಬಿದ್ದು 256 ಸೈನಿಕರನ್ನು ಕೊಂದು ಅನೇಕ ಯುದ್ಧ ಸಾಮಗ್ರಿಗಳನ್ನು ವಶಪಡಿಸಿಕೊಂಡಿರುವರು.

ಅಬಿಸೀನಿಯರ ಪಕ್ಷ ವಹಿಸಿದರು.

ದಕ್ಷಿಣ ಸೈನ್ಯಕ್ಕೆ ಸೇರಿದ್ದ 400 ಮಂದಿ ಅಬಿಸೀನಿಯಾ ಸೈನಿಕರು ಇಟಲಿಯ ಪಕ್ಷವನ್ನು ತೊರೆದು ಅಬಿಸೀನಿಯಾದ ಪಕ್ಷಕ್ಕೆ ಸೇರಲು ಹೊರಟಿರುವರು.

---

## ಆದಿ ಶ್ರೀ ಕಾವೇರಿ ಬಸ್ಸು ಸರ್ವಿಸ್ ಲಿಮಿಟೆಡ್, ಮಡಿಕೇರಿ.

### ಮೇಲ್ಕಂಡ ಕಂಪೆನಿಯಿಂದ ಶೇರು ಹೊಂದಿಕೊಂಡ ಮಹನೀಯರುಗಳು.

(ಮುಂದುವರಿದದ್ದು)

| | | |
|---|---|---|
| ಮಾ ರಾ. ಬಿಟ್ಟಿಯಂಡ ಬಿ. ಕಾರ್ಯಪ್ಪನವರು | 1 | ಶೇರು, |
| ,, ,, ಯಂ. ಗಣಪತಿಯವರು | 1 | ,, |
| ,, ,, ಬಿ. ಮೊದಪ್ಪನವರು | 1 | ,, |
| ,, ಬಿ. ಪಿ ಅಣಪ್ಪನವರು | 1 | ,, |
| ,, ಕಂಬೀರಂಡ ಕೆ. ತಿಮ್ಮಯ್ಯನವರು | 5 | ,, |
| ,, ಕಳ್ಳಿಚಂಡ ಕುಟ್ಟಪ್ಪನವರು | 10 | ,, |
| ,, ಪುಕ್ಕೇರಿರ ನಂಜುಂಡನವರು | 1 | ,, |
| ,, ಮೊಂಡಾಂಡ ಬಿ ಅಪ್ಪಯ್ಯನವರು | 1 | ,, |
| ,, ಪೊಡನೆಕೋಲಂಡ ಭೀಮಯ್ಯನವರು | 2 | ,, |
| ,, ತುಳುವಂಡ ಅಪ್ಪಯ್ಯನವರು | 1 | ,, |
| ,, ಮನೆಯಪಂಡ ಎ ಅಪ್ಪಚ್ಚನವರು | 1 | ,, |
| ,, ಪದಂಡ ವೆಂಕಣಪ್ಪನವರು | 1 | ,, |
| ,, ಕಾಂಗಿರ ಮುದ್ದಯ್ಯನವರು | 1 | ,, |
| ,, ಕೋಡಿರ ತಮ್ಮಯ್ಯನವರು | 1 | ,, |
| ,, ವೂಪಿಳ್ಳೆ ಕೆ. ವೈದುಂಗಟ್ಟಿಯವರು | 1 | ,, |
| ,, ವಾಟೇರಿರ ಪೊನ್ನಪ್ಪನವರು | 5 | ,, |

ಯು. ಯಂ. ಅಂಜೈಯ್ಯ,
8—5 ಸೆಕ್ರೆಟರಿ.

---

## ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘವನ ಮತ್ತು ದವಸ ಭಂಡಾರದ ಉದ್ದೇಶಬಾಧನೆಗಳೂ, ಬಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮಕ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾಖಲಾ ಫಾರಮುಗಳೂ, ಖರೀದು ಫಾರಮುಗಳೂ, ಜಮ್ಮ ಮಂಡೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾವಿನು ಖರೀದು ಫಾರಮುಗಳೂ, ಸೆಕ್ಯೂರ್ ಕೀಪರ್ ಖರೀದು ಫಾರಮುಗಳೂ ಓನರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜನರಲ್ ಲೆಡ್ಜರ್ ಪುಸ್ತಕಗಳೂ, ಮತ್ತು ಜೆರ್ನಲ್ ಪುಸ್ತಕಗಳೂ ನಮ್ಮಲ್ಲಿ ಕಡಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್
"ಕೊಡಗು" ಲಿಮಿಟೆಡ್,
ಮಡಿಕೇರಿ.

---


ಪ್ರಸಿದ್ಧ ಔಷಧಗಳು.

# ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನೈನನ್ನು ಯಾವ ರೂಪದಲ್ಲಿ ಸೇರಿಸಿಲ್ಲ.

"ನವರತ್ನ ಅಲ್ಮಾರಿಯಾ"

ಹಿಂದೂದೇಶದ ಔಷಧಗಳ ವಿಚಾರಣೆಯಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6 Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನೈನನ್ನು ಯಾವ ವಿಧದಲ್ಲಾ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದ ಸುಜೀವನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದುಂಟಾಗಬಹುದಾದ ಮೆಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲಿ ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರು 68, ಕೊಚಿನ್.

ಸ್ಟೋಕಿಸ್ಟ್—ಎ. ಎಸ್. ಮೂಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.
ಏಜೆಂಟ್—ವಿ. ಬಿ. ಕಾವುತ್, ಮಹದೇವಪೇಟೆ, ಮಡಿಕೇರಿ.
52—37

ನವರತ್ನ ಫಾರ್ಮಸಿ, ಕೊಚಿನ್.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

# ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್:

ಅಧ್ಯಕ್ಷರು—ಮಾನನೀಯ ಸರ್ ಎಲಪ್ಪಿಳಯಿ ಶಾನುಲವಾಸ್,
ಕೆ. ಟಿ. ಸಿ. ಐ. ಇ., ಜೆ ಪಿ. ಯವರು.

ಕೊಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

**ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.**

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವನವೆಚ್ಚ ಸಮ್ಮಂಧಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನಪೂರ್ತಿ ನುಡಿದಿರಿ.
ಪತಿವ್ರತೆಯರು ಮತ್ತು ವ್ಯಾಪಾರಸ್ಥರು ವಗೈರೆಯವರಿಗೆ ವಿಶೇಷವಿರುವ (ಜಾಯಿಂಟ್ ಲೈಫ್)
ಪಾಲಿಸಿ ಕಮ್ಮಿ ಪ್ರೀಮಿಯಮ್ ದಂದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಾಸ್ಮಾತ್ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯು ವೆಚ್ಚಲಗನ್ನು ನುಂದಳಿ
ಪ್ರೀಮಿಯವನ್ನು ವಸೂಲಾತಿ ಇಲ್ಲದೆ ಪೆನ್ಶನ್ ರೀತಿಯಲ್ಲು ಉದಾರತ್ವದಿಂದ ಕೊಡಲು
ಈ ಕಂಪೆನಿಯು ಏರ್ಪಾಡು ಮಾಡಿದೆ ಎಂದು ನೆನಪಿಲಿ
ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗೃಹಸ್ಥರು ಮತ್ತು ಹೆಂಗಸರಿಗೆ
ಉತ್ತಮ ತುಹವ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ವಿವರಕ್ಕೆ—ಬಿ. ಎನ್. ಐಯ್ಯಪ್ಪು,
ಕೊಡಗು ಬ್ರಾಂಚ್ ಏಜೆಂಟ್,
ನುಹದೇವಪೇಟೆ, ಮಡಿಕೇರಿ.

26—12



"ಖಾದಿ ವಸ್ತ್ರಗಳನ್ನು ಒಗೆಯಲಿಕ್ಕಾಗಿ 501 ಸೋಪಿನ ಸಾಬೂನನ್ನು ಉಪಯೋಗಿಸಿರುವೆಯಾ?"

"ಆದು ಖಾದಿ ವಸ್ತ್ರವನ್ನು ಅತೀ ಸ್ವಚ್ಛ ವಸ್ತ್ರ ಹೊಸತಾ ಮಾಡುವದಾಗಿ ಕಂಡು ಬಂದಿದೆ."

ಬೆಚ್ಚ ಕಡಿಮೆ.
ವಸ್ತ್ರ ಬಾಳಿಕೆ.
ಶ್ರಮ ಅತೀ ಕಡಮೆ!

ಟಾಮ್‌ಕೋ
ಮೂರಾಟದ ಮಳಿಗೆ,

TOMCO

೧, ಸೆಂಟ್ರಲ್ ಸ್ಟ್ರೀಟ್,
ಬೆಂಗಳೂರು ದಂಡು.

**501 Soap**

ತಯಾರಿಸುವವರು—ತಾತಾ ಆಯಿಲ್ ಮಿಲ್ಸ್, ಕಂಪೆನಿ, ಲಿಮಿಟೆಡ್, ಬೊರಿಬಾಯಿ, ಮತ್ತು ತಾತಾಪುರ.
52—40 ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂಪಿಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ಶುಚಿಕರ!!! ಆದರ್ಶ ವಿಶ್ರಾಂತಿಗೃಹ!!!!

# ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ
ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಅಧ ನಿಕವೂ ಆದ ಉಪಹಾರ ಗೃಹವೊಂದನ್ನು ನಿರೀಕ್ಷಿಸುವ ಮಹನೀಯರುಗಳ
ಸೌಕರ್ಯಕ್ಕಾಗಿ ತೆರೆಯಲಾಗಿರುವುದು.

ಶುದ್ಧವೂ, ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿತಿನಸುಗಳನ್ನೂ
ಕಾಫಿ—ಚಹಾ—ಕೊಕೊ—ಶರ್ಬತ್ತು ಇತ್ಯಾದಿ ಪಾನೀಯಗಳನ್ನೂ—
ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುವು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಕಾರ್ಯೋತ್ಸಾಹೀ
ವಿನೀತ ಸೇವಕರ ಏರ್ಪಾಡು ಇದೆ.

ಆಯುಕ್ಕೆ ತಕ್ಕ ವ್ಯಯಮಾಡುವವರು, ವ್ಯಯಕ್ಕೆ ತಕ್ಕ ಆಯವನ್ನು ಹೊಂದಬೇಕಾದ ಅತ್ಯಾಧುನಿಕ
ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ಪರೀಕ್ಷಿಸಿದ—ನೀವು ಹೊಂದಲೇಬೇಕಾದ—
ಸಕಲ ಅನುಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಪಡುವಿರಿ.

ಮಧುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ"ಪಾರ್ಟಿ—
"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—11 ಪ್ರೊಪ್ರೈಟರ್:—ನಾಯುನ ರಾವ್, ಗಾಯತೊಂಡೆ.

## ಡಾಕ್ಟರ್ ಫ್ರಾನ್ಸಿಸ್ ಪಿಂಟೋ
ದಂತ ವೈದ್ಯರು.

ನಿಮ್ಮ ಹಲ್ಲನ್ನು ಉಚಿತವಾಗಿ ಪರೀಕ್ಷಿಸುವರು.

ನಿಮ್ಮ ಶರೀರಕ್ಕೆ ನೋವಿಲ್ಲದಂತೆ ನಿಮ್ಮ ದಂತಕ್ಕೆ ಶಸ್ತ್ರಕ್ರಿಯೆ ಸಡಿಸಿ ಹಲ್ಲು ಕೀಳುವರು, ಶುಭ್ರಪಡಿಸುವರು, ಮತ್ತು ಕೂತಗಳನ್ನು ಮುಚ್ಚುವರು ಅಗಿಯುವುದಕ್ಕೂ, ಮಾತನಾಡಲಿಕ್ಕೂ, ಸೌಂದರ್ಯಕ್ಕೂ, ಉಪಯೋಗವಾಗುವಂಥಾ. ನೋಡಲು ನಿಜವಾದಂಥಾ ಕೃತಕ ಹಲ್ಲುಗಳನ್ನು ಬಹಳ ಉತ್ತಮ ತರಗತಿಯ ಸಾಮಾನುಗಳಿಂದಲೂ ಮತ್ತು ಕೆಲಸದಿಂದಲೂ, ಮಿತವ್ಯಯದಿಂದಲೂ, ಖಾತ್ರಿಯಾಗಿ ನಿಮ್ಮ ಮನವೊಪ್ಪುವಂತೆ ಕಟ್ಟಿ ಕೊಡುವರು.

ಟ್ರಾವಲರ್ಸ್ ಬಂಗ್ಲೋ,
4—1 ವಿರಾಜಪೇಟೆ, (ದ. ಕೊಡಗು)

## Wanted.

For the Coorg Honey and Wax Producers Co-operative Society Ltd.

(1) A manager on Rs. 25 per mensem with prospects of higher pay Applicants should perferably be students of Scince with business ability.

(2) A foreman on Rs. 20 per mensem with future prospects A working knowledge of boilers, steam engines and pumps and a little of carpentery is required of him

Selected candidates will be required to furunish cash and personal security. Applications should reach the under signed by 10th Mrrch '36.

**President,**
Coorg Honey and Wax Producer's
Socieiy, Ltd., Virajpet.

## ನಾಪೋಕ್ಲು
## ಗವರ್ನಮೆಂಟ್ ಮೋಡಲ್ ಶಾಲೆಯು
## ಮಣಿಬುಹೋತ್ಸವದ ಕಾಣಿಕೆ.

ಕಥೆ ನೊವೆಲ್ಲಾದ ವಿವಿಧ ಲೇಖನಗಳಿಂದಲೂ ಶಾಲೆಯ ಚಟುವಟಿಕೆಗಳ ವಿಷಯಗಳಿಂದಲೂ ಕೂಡಿದ ಪುಸ್ತಕ ಕೊಡಗಿನ ಪ್ರತಿಯೊಬ್ಬ ಮಾಹನೀಯರೂ ಸಂಗ್ರಹಿಸಿಕ್ಕ ಪುಸ್ತಕ.
ಅಪರೂಪದ ಪುಸ್ತಕ. ಬೆಲೆ ಆಣೆ 0—2—0 ಮಾತ್ರ.

ಖರ್ಚು ಕಳೆದು ಉಳಿಕೆಯಾದ ಹಣವೆಲ್ಲವೂ ಶಾಲೆಯ ಬಡ ಹುಡುಗರ ಫಂಡಿಗೆ ಸೇರುತ್ತದೆ.
ಪುಸ್ತಕ ದೊರೆಯುವ ಸ್ಥಳ:—

ಕಾರ್ಯದರ್ಶಿ, ಏಜೆಂಟರು,
ಬಾಲಕರ ಸಹಕಾರ ಸ್ಟೋರ್ಸ್, ಲಿಮಿಟೆಡ್, ನಾಪೋಕ್ಲು. } { 'ವಿಶ್ವಕರ್ಣಾಟಕ, ಮಡಿಕೇರಿ.

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲಾತಿಯಲ್ಲಿ ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ವಯಎಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

**ಸಬ್ ಏಜೆಂಟರುಗಳು.**

ವಿರಾಜಪೇಟೆ—ಮೆ. ಮುಂಡೇಪಂಡ ಸೋಮೆಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಬಿ. ಮಾಡಯ್ಯನವರು
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚ್ಚಯ್ಯನವರು
ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು
ನಾಪೋಕ್ಲು—ಮೆ, ಬೆಳ್ಳಿಪಂಡ ಯಂ, ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

## ಶ್ರೀ ರಾಮಕೃಷ್ಣ ಶತಮಾನೋತ್ಸವ.

1936–37

### ಮಹಾಧ್ಯಕ್ಷರ ಸಂದೇಶ.

ಶ್ರೀ(ಗುರುದೇವ ರಾಮಕೃಷ್ಣ ಪರಮಹಂಸರು.)

ಜಗಜ್ಜೀವನದ ಆಕಾಶದಲ್ಲಿ ನವಯುಗದ ಅರುಣೋದಯವಾಗುತ್ತಿದೆ ಅದರ ಜ್ಯೋತಿರ್ಮಹಿಮೆಯಿಂದ ನಮ್ಮ ಹೃತ್ಕಮಲಗಳು ಅರಳುವ ಮಂಗಳ ಮೂಹೂರ್ತವು ಬಳಿಸಾರುತ್ತಿದೆ.

ತಿಳಿದೋ ತಿಳಿಯದೆಯೋ ಎಂಬವರೆಲ್ಲರೂ ಗುರುದೇವನ ಸರ್ವ ಧರ್ಮ ಸಮನ್ವಯ ಸಂದೇಶದಿಂದಲೂ, ಆತನ ಕರ್ಮ, ಜ್ಞಾನ, ಭಕ್ತಿ, ಮತ್ತು ಯೋಗಗಳ ಸಮೈಕ್ಯಭಾವದ ನಿರುಪಮವಾದ ಅನುಭೂತಿಯಿಂದಲೂ ಪ್ರೇರಿತರಾಗಿ ಮುಕ್ತಿಪಥದಲ್ಲಿ ಮುಂದುವರಿಯುತ್ತಿದ್ದಾರೆ. ಸ್ಥಲ, ಜಲ, ಸರ್ವ ದೇಶಗಳಲ್ಲಿಯೂ ವಿಶ್ವ ಶಾಂತಿಯ ಮಹಾ ಸಾಮ್ರಾಜ್ಯ ಸಂಸ್ಥಾಪನೆಯಾಗುವ ದಿನವು ಒಹು ದೂರವಾಗಿಲ್ಲ. ಗುರುದೇವನ ಪ್ರೇಮಪೂರ್ಣವಾದ ಆಹ್ವಾನ ವಾಣಿಯನ್ನು ಕೇಳಿ ಸರ್ವ ರಾಷ್ಟ್ರದವರೂ, ಸರ್ವ ಜನಾಂಗದವರೂ, ಸಮ್ಮಿಳಿತರಾಗಿ 'ಪಥಗಳಿರುವಂತೆ—ಮತಗಳಿರುತ್ತವೆ' ಎಂಬ ಗುರುವಾಣಿಯನ್ನು ವಾದವಿಲ್ಲದೆ, ದ್ವೇಷವಿಲ್ಲದೆ, ವೈರಭಾವವಿಲ್ಲದೆ, ಉಚ್ಚ ಕಂಠದಿಂದಲೂ, ಉನ್ನತಾನಂದದಿಂದಲೂ ಜಯಘೋಷಮಾಡುವ ಆ ಪುಣ್ಯ ದಿನವು ಬಹು ದೂರವಾಗಿಲ್ಲ ಆ ಶುಭಮೂಹೂರ್ತದಲ್ಲಿ ಗುರುದೇವನ ಕೀರ್ತಿ ಸೂರ್ಯನು ಗಗನ ಮಧ್ಯಕ್ಕೇರಿ ವಿರಾಜಿಸುತ್ತಾನೆ. ಲೋಕದ ಕತ್ತಲೆಯನ್ನು ಕತ್ತರಿಸುತ್ತಾನೆ. ಗುರುದೇವನ ನವಯುಗ ಧ್ವಜಪತಾಕೆಯ ಪುಣ್ಯ ಛಾಯೆಯಲ್ಲಿ ವಾಸವ ಪುತ್ರ ಪುತ್ರಿಯರೆಲ್ಲರೂ, ಧರ್ಮ ಬಂಧುಗಳಾಗಿ ನೆರೆದು ನಿಂತು ಘೋಷಿಸುವ ಆ ಜಯಗಾನವು ದಿಗ್ದಿಗಂತ ವ್ಯಾಪ್ತಿಯಾಗುತ್ತದೆ.

ಈ ಧನ್ಯ ಮಹಾ ದಿನದಲ್ಲಿ ಪೃಥ್ವಿಯ ಅವೃತ ಪುತ್ರರೆಲ್ಲರೂ ಗುರುದೇವನ ಅವತಾರದ ಅರ್ಥವನ್ನು ತಿಳಿದು ಪುನೀತರಾಗಲಿ, ಇದೇ ನನ್ನ ಹೃತ್ಪೂರ್ವಕವಾದ ಪ್ರಾರ್ಥನೆ.

ಓಂ ಶಾಂತಿ, ಶಾಂತಿ: ಶಾಂತಿ;

---

## ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಭಾ ಬೆಂಗಳೂರು ಸಿಟಿ.

ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಭೆಯ ಮಹಾಧಿವೇಶನವು ತಾ. 20—2—1936 ಕ್ಕೆ ನ್ಯಾಷನಲ್ ಹೈಸ್ಕೂಲ್ ಭವನದಲ್ಲಿ ಜರುಗಿತು. ಸಭೆಯ ಅಧ್ಯಕ್ಷರಾದ ಮ. ರಾ. ನ ವರತ್ನ ರಾಮರಾಯರು ಅಗ್ರಾಸನವನ್ನು ಅಲಂಕರಿಸಿದ್ದರು. ದೇಶಭಕ್ತ ಕರ್ನಾಡ ಸದಾಶಿವರಾಯರು, ಧಾರವಾಡದ ಗೋವಿಂದರಾವ್ ಕಲಘಟಗಿ, ಮಂಗಳೂರಿನ ಶ್ರೀ ಕೆ. ಪಿ. ಕಿಣಿ ಬಿ. ಎ ಯಲ್. ಟಿ, ಮಹಿಳಾ ಸೇವಾಸಮಾಜದ ಕಾರ್ಯದರ್ಶಿ ಶ್ರೀಮತೀ ಕಮಲಮ್ಮ ದಾಸಪ್ಪ ಬಿ. ಎ. ಮೊದಲಾದ ಮಹನೀಯರು ಮಹಿಳೆಯರೂ ಕರ್ನಾಟಕದ ಎಲ್ಲಾ ಕಡೆಗಳಿಂದಲೂ ಸುಮಾರು 20 ಜನ ಹಿಂದೀ ಪ್ರಚಾರ ಪ್ರವರ್ತಕರು ಸಭೆಗೆ ಒಂದಿದ್ದರು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಸಂಚಾಲಕರಾದ ಶ್ರೀ ಸತ್ಯನಾರಾಯಣಜೀ ಮುಂತಾದ ವಿಶೇಷ ಆಮಂತ್ರಣದ ಮೇಲೆ ಹಾಜರಾಗಿದ್ದರು. ಸಮಾರಂಭದಲ್ಲಿ ಗೌ ಕಾರ್ಯದರ್ಶಿಗಳಲ್ಲಿ ಕ. ಸಂಪದ್ಗಿರಿರಾವ್ ಯಂ. ಎ. ಅವರು ತಾತ್ಕಾಲಿಕ ಕಾರ್ಯಕಾರಿ ಸಮಿತಿಯ ವರದಿಯನ್ನು ಒಪ್ಪಿಸಿದರು. ಅನಂತರ ಸಭೆಯ ನಿಯಮಾವಳಿ ಪರಿಷ್ಕಾರವು ಚರ್ಚಿಸಲ್ಪಟ್ಟು ಸ್ವೀಕೃತವಾಯಿತು. ನಿಯಮಾವಳಿಯನುಸಾರವಾಗಿ ಸದಸ್ಯರನ್ನು ಸೇರಿಸಿಕೊಳ್ಳಬೇಕಾದ ಪ್ರಯುಕ್ತ ಚಂದಾಣಿಯು ಕಾರ್ಯವು ಕೆಲವು ಕಾಲದ ಮಟ್ಟಿಗೆ ಮುಂದಿರಿಸಲ್ಪಟ್ಟಿತು. ಕರ್ನಾಟಕದ ಪ್ರಮುಖ ಹಿಂದೀ ಪ್ರೇಮಿಗಳು ಸದಸ್ಯರಾಗಿರುವುದರಿಂದ ಮೂಲಕ ಈ ಪ್ರಾಂತ್ಯದಲ್ಲಿ ಶಿಕ್ಷಣ ಕಾರ್ಯಕ್ಕೆ ಬೆಂಬಲ ಕೊಡಬೇಕೆಂದು ಏಕಮತ ಸಭೆಯ ನಿಯಮಾವಳಿಗಳ ಮತ್ತು ಸದಸ್ಯ ಪತ್ರಗಳು ಸಭೆಯ ಕಾರ್ಯಾಲಯದಲ್ಲಿ ಎಲ್ಲ ದೊರೆಯುತ್ತವೆ.

ಸಿದ್ಧನಾಥಪಂತ್

ಅ. ಕ. ಹಿಂದೀ ಪ್ರಚಾರಕ ಸಭೆ,
ನ್ಯಾಷನಲ್ ಹೈಸ್ಕೂಲ್.

---

## ಕರ್ನಾಟಕವೂ ಪತ್ರಿಕೋದ್ಯಮವೂ.

(ಡಾ. ಎನ್. ಎಸ್. ಹರ್ಡೀಕರರಿಂದ)

ನಾನೇನು ಪತ್ರಿಕೋದ್ಯಮಿಯಲ್ಲ, ಆದನ್ನು ಕಲಿಯಲೂ ಇಲ್ಲ. ಆದರೆ ಪತ್ರಿಕಾ ಪ್ರಪಂಚದೊಡನೆ ಕೆಲವು ವರ್ಷಗಳ ಸಂಬಂಧ ನನಗಿರುವದರಿಂದ ಪತ್ರಿಕೋದ್ಯೋಗವೆಂದರೇನು, ಅದರಿಂದ ರಾಷ್ಟ್ರದ ಉನ್ನತಿಗೆ ಯಾವ ರೀತಿ ಸಹಾಯವಾಗಬಹುದು, ಎಂಬುದನ್ನು ತಿಳಿದುಕೊಂಡಿದ್ದೇನೆ. ಅಮೇರಿಕದಲ್ಲೂ ಇಂಡಿಯದಲ್ಲೂ ರಾಷ್ಟ್ರೀಯ ಪ್ರಚಾರವನ್ನು ಕೈಕೊಂಡಿದ್ದು, ಪತ್ರಿಕೆಯ ಉಪಯೋಗವೆಷ್ಟಿದೆಯೆಂದು ನನಗೆ ಚೆನ್ನಾಗಿ ಮಂದಟ್ಟಾಗಿದೆ. ಪಾಶ್ಚಿಮಾತ್ಯರು ಇದನ್ನು ಒಂದು ದೊಡ್ಡ ಶಾಸ್ತ್ರವನ್ನಾಗಿ ಮಾಡಿ ದಿನ ದಿನವೂ ಅದರಲ್ಲಿ ಅಭಿವೃದ್ಧಿ ತೋರಿಸುತ್ತಿದ್ದಾರೆ. ಜನತೆಗೆ ಜೀವನದ ನಾನಾ ಶಾಖೆಗಳಲ್ಲಿ ಶಿಕ್ಷಣ ಕೊಟ್ಟು ಅವರ ವಿಚಾರವನ್ನು ಯೋಗ್ಯ ರೀತಿಯಲ್ಲಿ ತಿರುಗಿಸುವದಕ್ಕೆ ಪತ್ರಿಕೋದ್ಯಮದಲ್ಲಿ ಅವಕಾಶವಿದೆ,

ಕರ್ನಾಟಕದಲ್ಲಿ ಪತ್ರಿಕಾ ಪ್ರಚಾರವು ಸುಮಾರು ಅರ್ಧ ಶತಮಾನದಿಂದಿದ್ದರೂ ಇನ್ನೂ ಅರ್ಧ ಜೀವದಲ್ಲೇ ಇದೆ. ಪಾಶ್ಚಿಮಾತ್ಯರ ಪತ್ರಿಕೆಗಳನ್ನೂ ಕರ್ನಾಟಕದ ಪತ್ರಿಕೆಗಳನ್ನೂ ಹೋಲಿಸಿದರೆ ಒಂದೊಂದಕ್ಕೆ ಅರ್ಥಾರ್ಥ ಸಂಬಂಧವಿಲ್ಲದ ಹಾಗೆ ಕಾಣುವದು. ದೂರ ಹೋಗಲೇಕೆ? ಪಕ್ಕದ ಪ್ರಾಂತ್ಯಗಳದೊಂದಿಗೆ ಸಹಾ ನಮ್ಮವು ತಾಳಿಕೆ ನಿಲ್ಲವು.

ಇದರಿಂದ ಕರ್ನಾಟಕ ಪತ್ರಿಕೆಗಳನ್ನು ಉತ್ತಮಗೊಳಿಸುವ ಪ್ರಯತ್ನವು ನಡೆಯುತ್ತಿಲ್ಲವೆಂದು ತಿಳಿಯಬಾರದು. ಎಷ್ಟೋ ಸಂಸ್ಥೆಗಳೂ, ವ್ಯಕ್ತಿಗಳೂ, ಹಗಲಿರುಳೂ ಅದಕ್ಕಾಗಿ ದುಡಿಯುತ್ತಿದ್ದಾರೆ. ಹಣ—ಹಣದ ಭಾವವು ದೊಡ್ಡ ಅಡಚಣೆಯೆಂದಿಟ್ಟುಕೊಂಡರೂ ಸಹ ಲೋಪಗಳಿನ್ನೂ ಎಷ್ಟೋ ಇವೆ. ಪತ್ರಿಕೋದ್ಯಮದಲ್ಲಿ ಕೆಲಸ ಮಾಡುತ್ತಿರುವ ಬಹು ಮಂದಿಯಲ್ಲಿ ಹಿಡಿದ ಕೆಲಸವನ್ನು ಮಾಡುವ ಹಠವಿಲ್ಲ. ಒಂದು ತತ್ವವನ್ನು ಪಾಲಿಸುವದಿಲ್ಲ, ಸ್ವಾವಲಂಬನವಿಲ್ಲ, ಯೋಗ್ಯ ಶಿಕ್ಷಣವಿಲ್ಲ, ಪರಸ್ಪರ ಸಹಕಾರವಿಲ್ಲ. ಹಾಗೇ ಎಷ್ಟೋ ಕಾರಣಗಳಿವೆ.— ಕನ್ನಡದ ಪತ್ರಿಕೋದ್ಯಮವು ಉನ್ನತಿಗೇರಲಿಕ್ಕೆ ಅಡ್ಡಿಗಳು ಕರ್ನಾಟಕ ಜನತೆಯಲ್ಲಿ ರಾಜಕೀಯದ ಜಾಗೃತಿಯನ್ನುಂಟುಮಾಡಿದ ನಾಯಕರು ಪ್ರಚಾರದ ಮುಖ್ಯಾಂಗವಾದ ಪತ್ರಿಕೋದ್ಯಮಕ್ಕೆ ಶಕ್ತಿಮೀರಿ ಪ್ರೋತ್ಸಾಹ ಕೊಡದೆ ಕರ್ನಾಟಕವು ಇತರ ಪ್ರಾಂತ್ಯಗಳಿಗಿಂತ ಹಿಂದುಳಿಯಬೇಕಾಯಿತು.

ಇದರ ಪರಿಣಾಮವೇನು? ಕರ್ನಾಟಕವು ರಾಜಕೀಯಾಭಿವೃದ್ಧಿಗಾಗಿ ಇತರ ಪ್ರಾಂತ್ಯಗಳ ಪತ್ರಿಕೆಗಳನ್ನು ನಂಬಿಕೊಳ್ಳಬೇಕಾಯಿತು. ನಮ್ಮ ಪ್ರಾಂತ್ಯಗಳಲ್ಲಿ ಇತರ ಭಾಷೆಗಳ ಪತ್ರಿಕೆಗಳು ಸುರಿಯಲಾರಂಭಿಸಿದವು ಕನ್ನಡವನ್ನು ಬಿಟ್ಟು ಬೇರೊಂದು ಭಾಷೆಯನ್ನರಿಯದ ಕನ್ನಡಿಗರಿಗೆ ದಿನ ದಿನಕ್ಕೆ ವ್ಯತ್ಯಾಸವಾಗುವ ಪ್ರಪಂಚ ಪರಿಸ್ಥಿತಿಗಳು ಸರಿಯಾಗಿ ತಿಳಿಯದ ಹೋದವು. ಕೊನೆಗೆ ಕನ್ನಡಿಗರು ಹಿಂದುಳಿಯಬೇಕಾಯಿತು.

ಕರ್ನಾಟಕದಲ್ಲಿ ಪ್ರಖ್ಯಾತರಾದ ಲೇಖಕರಿದ್ದಾರೆ. ಅವರಲ್ಲಿ, ಪತ್ರಿಕೋದ್ಯಮವನ್ನು ಅರಿತವರು ಇತರ ಪ್ರಾಂತೀಯರಿಗೆ ಹಣದಾಸೆಗಾಗಿ ತಮ್ಮ ಬುದ್ಧಿ ಬಲವನ್ನು ಮಾರುತ್ತಿದ್ದಾರೆ ಇನ್ನು ಪತ್ರಿಕೆಗಳನ್ನು ನಡೆಸಬಲ್ಲ ಯೋಗ್ಯತೆಯುಳ್ಳ ಕೆಲವರು ಆಲ್ಲೊಂದು ವಾರ ಪತ್ರಿಕೆ, ಇಲ್ಲೊಂದು ಮಾಸಪತ್ರಿಕೆ ಹೀಗೆ ಪ್ರಕಟಿಸುವದಕ್ಕೆ ಹತ್ತಿದರು ಅದರಿಂದ ಅವರಿಗೆ ಲಾಭ ಬರಲಿಲ್ಲ. ದೇಶಕ್ಕೆ ಹಿತವಾಗಲಿಲ್ಲವೆಂಬುದನ್ನು ಕಂಡು ಕೆಲವು ಕಾಲದ ನಂತರ ಉದಾಸೀನರಾಗಿ ಬಿಟ್ಟರು.

ಇದು ಕರ್ನಾಟಕ ಪತ್ರಿಕೋದ್ಯಮದ ಹಣೇಬರಹ. ಹಾಗಾಗಿ ಜನತೆಯ ದೃಷ್ಟಿಯಲ್ಲಿ ಪತ್ರಿಕೆಗಳೂ ಪತ್ರಿಕೋದ್ಯಮಿಗಳೂ ತಮ್ಮ ಗೌರವನ್ನು ಕಳೆದುಕೊಂಡಿದ್ದಾರೆ.

---

## ಮುನ್ಸಿಪಲ್ ವಿೂಟಿಂಗು ಮಡಿಕೇರಿ.

ತಾರೀಖು 30—1—1936 ರಲ್ಲು ಮ. ರಾ. ಐ. ಸಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲು ನಡೆದ ಮಡಿಕೇರಿ ಮುನ್ಸಿಪಲ್ ಕಮಿಟಿಯ ಜನರಲ್ ವಿೂಟಿಂಗು.

ಮೆ. ಗಳಾದ ಎಸ್. ಒಸಪ್ಪನವರು ವೈಸ್ ಪ್ರೆಸಿಡೆಂಟರು ಎ. ಎ ವಾರುಂಣಿಯವರು ಪಿ ಐ. ಬೆಳ್ಯಪ್ಪನವರು ಯಂ. ಯಂ. ಬೆಳ್ಯಪ್ಪನವರು ಕೆ. ಯಿಂ ಮಹ್ಮದ್ ಗೌಸರು ಕೆ. ಮಲ್ಲಪ್ಪನವರು ಎನ್. ಸೋಮಣ್ಣನವರು ವಿ. ಯನ್. ನಂಜಪ್ಪ ಶೆಟ್ಟರು ಆರ್. ಫ್ರಾಂಜ್ವಿಯವರು ಹಾಜರಿದ್ದರು.

1. ತಾ. 19—12—1935 ರ ಕಳೆದ ಜನರಲ್ ವಿೂಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಅನುಮೋದಿಸಲಾಯಿತು. ಮತ್ತ ಮುನ್ಸಿಪಲ್ ವ್ಯಾಕ್ಸಿನೇಟರ ಡೈರಿಯನ್ನು ಪ್ರತಿ ತಿಂಗಳು ಮುನ್ಸಿಪಲ್ ಆಫೀಸಿಗೆ ಕಳುಹಿಸುವಂತೆ ಮಾಡಲು ಸಿವಿಲ್ ಸರ್ಜನರಿಗೆ ತಿಳಿಸುವಂತೆ ನಿಶ್ಚಯವಾಯಿತು

2. ಪ್ಲಸ್ ಮತ್ತು ಮೈನಸ್ ಮೆಮೋ, ತಿಂಗಳ ಆಡಿಟ್ ರಿಪೋರ್ಟು ಸಿವಿಲ್ ಸರ್ಜನರ ಸ್ಯಾನಿಟರಿ ರಿಪೋರ್ಟು ಮತ್ತ ಮುನ್ಸಿಪಲ್ ಓವರ್ಸಿಯವರ 1935 ನೇ ಡಿಸೆಂಬರ್ ತಿಂಗಳ ಕೆಲಸದ ರಿಪೋರ್ಟನ್ನು ಓದಿ ರಿಕಾರ್ಡ್ ಮಾಡಲಾಯಿತು.

3 ವಸೂಲಿಯ ಪ್ರಯತ್ನವೆಲ್ಲಾ ಕಳೆದ ನಂತರವೇ ಸ್ಥಿರ ಸೊತ್ತುಗಳನ್ನು ಕಂದಾಯದ ವಸೂಲಿಗೆ ಹರಾಜಿಗೆ ಮಾಡಬೇಕೆಂದು ಮೆ. ಯಂ. ಯಂ. ಬೆಳ್ಯಪ್ಪನವರು ತಂದ ಠರಾವನ್ನು, ಪೈಸಿಡೆಂಟರು ಸ್ಥಿರಸೊತ್ತುಗಳನ್ನು ಪಕ್ಷನೆ ಹರಾಜಿಗೆ ತಾರದೆ, ಸಾಧ್ಯವಾದ ಮಟ್ಟಿಗೆ ಕಂದಾಯ ವಸೂಲು ಮಾಡುವ ಪ್ರಯತ್ನಮಾಡಿ ಅದೆಲ್ಲಾ ಮುಗಿದ ನಂತರವೇ ಸ್ಥಿರ ಸೊತ್ತನ್ನು ಹರಾಜಿಗೆ ತರುವುದೆಂದು ಹೇಳಿದ ಬಳಿಕ ಸದರಿ ಠರಾವನ್ನು ವಾಪಾಸು ತೆಗೆದುಕೊಂಡರು.

4. ಮನೆ ಕಟ್ಟಲು ದಾಸ್ತಾಳದ ಬಳಿ ಜಾಗ ಕೊಡಬೇಕಾಗಿ ಮುನ್ಸಿಪಲ್ ಸೂಲಗಿತ್ತಿ ಭಾಗ್ಯಮ್ಮನು ಅರ್ಜಿ ಬರಕೊಂಡದ್ದಕ್ಕೆ ಸದರಿ ಜಾಗವನ್ನು ಕೊಡಲಾಗುವುದಿಲ್ಲವೆಂದು ಮತ್ತು ಬೇರೆ ಯಾವುದಾದರು ಒಂದು ಜಾಗಕ್ಕೆ ಅರ್ಜಿ ಹಾಕಬಹುದೆಂದು ತೀರ್ಮಾನವಾಯಿತು.

5. ಈ ಕೆಳಗಿನ ಎಸ್ಟಿಮೇಟುಗಳನ್ನು ಓದಿ ಮಂಜೂರು ಮಾಡಲಾಯಿತು.

(1) ಮಾರ್ಕೆಟ್ ಕಟ್ಟಡಗಳಿಗೆ ಸುಂಣ ಮತ್ತು ತಾರು ಹಾಕುವುದಕ್ಕೆ ರೂ 166—8—6 (2) ಹಿಂದುಸ್ಥಾನಿ ಸ್ಕೂಲಿಗೆ ಸುಂಣ ಮತ್ತು ತಾರು ಹಾಕುವುದಕ್ಕೆ ರೂ 22—7—0 (3) ಮಹಾದೇವಪೇಟೆ ಸ್ಕೂಲಿಗೆ ಸುಂಣ ಮತ್ತು ತಾರು ಹಾಕುವುದಕ್ಕೆ ರೂ 23—6—0 (4) ಮಹಾದೇವಪೇಟೆ ಸ್ಕೂಲ್ ಮತ್ತು ಇದರ ಬಳಿ ಇರುವ ತ್ರಿಕೋಣ ಜಾಗಕ್ಕೆ ಕಲ್ಲು ಕಟ್ಟಿ ಮಟ್ಟ ಮಾಡಲು ರೂ 78—0—0 (5) ಸಾಪರ್ಸ್ ಲೈನಿನ ರಸ್ತೆ ಉತ್ತರಕ್ಕೆ 150 ಅಡಿ ಉದ್ದ ಮತ್ತು ದಕ್ಷಿಣಕ್ಕೆ 50 ಅಡಿ ಉದ್ದಕ್ಕೆ 3 ರಿಂದ 4 ಇಂಚು ದಪ್ಪದ ಕಲ್ಲಿನಿಂದ ..... 268—0—0 (6) ದೇವಸ್ಥಾನದ ಬಳಿಯಲ್ಲಿರುವ ಕಕ್ಕುಸನ್ನು ಪೈರಿ ಮಾಡಲು ಮತ್ತು ಬಿದ್ದುಹೋದ ಗೋಡೆ ಕಟ್ಟಲು 47—0—0 (7) ಗಾಳಿಕೇರಿಯಲ್ಲು ಹೆಂಗಸರಿಗೆ 4 ಸೀಟಿನ ಕಕ್ಕೂಸನ್ನು ಕಟ್ಟಲು ರೂ. 300—9—0

6 ಈ ಕೆಳಗಿನ ಅರ್ಜಿದಾರರಿಗೆ ಒಂದನೇ ಕೆರೆಯಿಂದ ಸ್ವಂತ ಪಂಪುಗಳನ್ನು ಕೊಡಲಾಯಿತು

ಮೆ ಗಳಾದ ಬಿ ಶಾಂತಪ್ಪನವರು ಪದ್ಮನಾಭರಾವ್ ವಿ ಬೊಡ್ಡಯ್ಯನವರು ಹೆಚ್ ಯಂ ಅಪ್ಪಂಣಮ್ಮಯನವರಿಗೆ ಮತ್ತು ಎನ್ ಸಿ ಮೇದಯ್ಯನವರು

7 ಕೂನ್‌ಶೆಬ್ಬ ಶಕುನಯ್ಯಶೆಟ್ಟು ವಾರ್ಕೆಟ್ ಸುಂಕ ವಸೂಲಿ ಕಂಟ್ರಾಕ್ಟು ಹಣದಲ್ಲಿ ರಿಮಿಷನ್ ಕೊಡಬೇಕೆಂದು ಬರಕೊಂಡ ಅರ್ಜಿಯನ್ನು ಓದಿ, ಅವರಿಗೆ ನಷ್ಟವಾಗಿರುವ ಬಗ್ಗೆ ವಿವರವಾದ ಲೆಕ್ಕವನ್ನು ಹಾಜರುಮಾಡಿದ ನಂತರವೇ ಸದರಿ ರಿಮಿಷನ್ ವಿಚಾರಿಸಿ ಆಲೋಚನೆ ಮಾಡಲಾಗುವುದು ಎಂದು ತೀರ್ಮಾನವಾಯಿತು.

8 ಮಡಿಕೇರಿ ಕೊಡ್ಲಿಪೇಟೆ ರಸ್ತೆಯನ್ನು ರಿಪೇರಿ ಮಾಡಲು ಪ್ರತಿ ವರ್ಷ ರೂ. 200 ನ್ನೂ ಮತ್ತು ಸದರಿ ರಸ್ತೆಗೆ ಟವುನ್ ಅಖೈರ್ ವರೆಗೆ ತಾರು ಹಾಕುವ ಬಗ್ಗೆ ಸರಿ ಅರ್ಧ ಚಾರ್ಜನ್ನು ಕೊಡಬೇಕಾಗಿ ಎಗ್ಸಿಕ್ಯುಟಿವ್ ಇಂಜಿನೀಯರ್ ತಾ. 3—12—1935 ರಲ್ಲು ಬರೆದ ಪತ್ರ ನಂಬ್ರ ವಿ/ಸ್. 1804 ಓದಲಾಯಿತು.

ಸದರಿ ರಸ್ತೆಯ ರಿಪೇರಿ ಖರ್ಚಿನ ಬಗ್ಗೆ ಮುನ್ಸಿವಾಲಿಟಿಯಿಂದ ಶೇಕಡ ರೂ 25%ನ್ನು ಕೊಡುವಂತೆಯೂ ಮತ್ತು 200 ರೂ ಗಳನ್ನು ಕೊಡುವ ಬಗ್ಗೆ ಎಷ್ಟು ಅಡಿ ಉದ್ದದ ವರೆಗೆ ಮತ್ತು ಎಲ್ಲಿಂದ ಎಲ್ಲಿಯ ವರೆಗೆ ಸದರಿ ರಸ್ತೆಯನ್ನು ರಿಪೇರಿ ಮಾಡುವುದು ಎಂಬ ಸಂಗತಿಯನ್ನು ಎಗ್ಸಿಕ್ಯುಟಿವ್ ಇಂಜಿನೀಯರನ್ನು ಕೇಳುವಂತೆ ತೀರ್ಮಾನವಾಯಿತು.

9 ವಾರ್ಕೆಟ್ ಮತ್ತು ಟೋಲ್‌ಗೇಟುಗಳ ಸುಂಕವನ್ನು ಹರಾಜು ಮಾಡುವ ಬಗ್ಗೆ ಒಂದು ತಾರೀಕನ್ನು ನಿರ್ಣಯಮಾಡಬೇಕಾಗಿ ಹೆಡ್ ಕ್ಲಾರ್ಕರು ಬರೆದ ರಿಪೋರ್ಟನ್ನು ಓದಿ ತಾರೀಕು 6—3—1936 ರಲ್ಲು ಸದರಿ ಹರಾಜು ಮಾಡುವಂತೆ ನಿಶ್ಚಯವಾಯಿತು.

10 ಸನ್ನಿಸೈಡ್ ಬಂಗ್ಲೆ ಬಳಿ ಒಂದು ಪಬ್ಲಿಕ್ ನಲ್ಲಿಯನ್ನು ಮಾಡಿಗಿ ಕೊಡಬೇಕಾಗಿ ಎ ವಿ ಸುಬ್ರಮಣ್ಯನು ಬರಕೊಂಡ ಅರ್ಜಿಯನ್ನು ಓದಿ, ಅನುಕೂಲವಿರುವ ಜಾಗದಲ್ಲಿ ಒಂದು ಪಬ್ಲಿಕ್ ನಲ್ಲಿಯನ್ನು ಮಾಡಗುವಂತೆ ನಿಶ್ಚಯವಾಯಿತು.

11 ಗಾಳಿಕೇರಿಯಲ್ಲಿ ಇನ್‌ಸ್ಯಾನಿಟರಿ ಜಾಗಗಳನ್ನು ಮುನ್ಸಿಪಾಲಿಟಿಗೆ ತೆಗೆದುಕೊಳ್ಳುವ ಬಗ್ಗೆ ಓವರ್ಸಿಯವರು ಮಾಡಿದ ರಿಪೋರ್ಟನ್ನು ಓದಿ ಸದರಿ ಜಾಗಗಳನ್ನು ನ್ಯಾಯವಾದ ಕ್ರಯಕ್ಕೆ ಕೊಂಡುವಂತೆ ತೀರ್ಮಾನವಾಯಿತು

12 ಕ್ಯಾಜ್‌ಮೆಂಟ್ ವಿಸ್ತೀರ್ಣಕ್ಕೆ ಹಂಗಾಮಿಯಾಗಿ ಒಬ್ಬ ವಾಚ್‌ಮೇನ್‌ನನ್ನು ಮಡಗಬೇಕಾಗಿ ಓವರ್ಸಿಯವರು ಬರೆದ ರಿಪೋರ್ಟಿನಂತೆ ತಾ 15—2—1936 ರಿಂದ 3 ತಿಂಗಳ ವರೆಗೆ ಒಬ್ಬನನ್ನು ನಿಯಮಕ ಮಾಡುವಂತೆ ತೀರ್ಮಾನವಾಯಿತು.

13. ಮನೆ ಕಂದಾಯ 1—14—0 ನ್ನು ದಳದ ಕಂದಾಯ 0—10—0 ಗೆ ಇಳಿಸಬೇಕೆಂದು ಐ ಯಂ ಅಬ್ದುಲ್ಲನವರು ಬರೆದ ಅರ್ಜಿಯನ್ನು ಓದಿ, ಸದರಿ ಜಾಗಗಡಲ್ಲಿ ಈಗ ಮನೆಯಿಲ್ಲದ ಕಾರಣ ಸದರಿ ಕಂದಾಯವನ್ನು 0—10—0ಗೆ ಇಳಿಸಲಾಯಿತು.

14. ಈ ಮುನ್ಸಿಪಾಲಿಟಿಗೆ ಡನ್‌ಲೋಪ್ ಗಾಡಿಗಳನ್ನು ತರಬೇಕೆಂದು ಇದ್ದ ಇರಾದೆಯನ್ನು ಓದಿ ಸದರಿ ಸಂಗತಿಯನ್ನು ಹಾಲಿ ಬಡ್ಜೆಟ್ ವಿಸ್ತೀರ್ಣಿಗಿನಲ್ಲಿ ತೀರ್ಮಾನಿಸುವಂತೆ ತಾಯಿತು.

ಐ. ಸಿ. ಸುಬ್ಬಯ್ಯ,
(ಪ್ರೆಸಿಡೆಂಟ್.)

## ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

| | | ರೂ |
|---|---|---|
| ಶೇರ್ ಬಂಡವಾಳ | — | 50,000— 0—0 |
| ವಸೂಲಾದ ಶೇರ್ ಮೊಬಲಗು | — | 37,180— 0—0 |
| ಜಮೂಬಂದ ಠೇವಣಾತಿ | — | 25,9035—8—10 |
| ವಸೂಲಾದ ಕ್ಷೇಮನಿಧಿ | — | 1,03851— 4—0 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಬೇಕಾಗಿದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಸಂದ್ಯಂಡ ಐ. ಬೆಳ್ಯಪ್ಪನವರು.

ಜ್ಯೆಜರರ್ ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಖು 1-2-1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯೂಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದಿದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾದ್ದಾಗಿರುತ್ತಿರಲಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ಸರ್ವಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ಯವಾಗಿ, ಆಗಿಂದಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುದಾದರೆ ಒಡನೆ ಪ್ರಸಿದ್ಧಿ ಹೊಂದಿರುವ

**ಡೋಂಗರೆ ಬಾಲಾಮೃತವನ್ನು**

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರಾಯಿಟರ್ಸ್—

ಕೆ. ಟಿ. ಡೋಂಗರೆ ಕಂಪೆನಿ,

(52-52) ಗಿರಿಗಾಂವ್, ಬೊಂಬಾಯಿ.

# EMPIRE OF INDIA LIFE ASSURANCE CO., LTD.

ESTD. 1897.

## TEN YEARS' PROGRESS.

| | 1925 Rs. | 1935 Rs. |
|---|---|---|
| Income .... .... .... .... | 45,50,127 .... | 73,28,467 |
| New Assurances .... .... .... | 78,07,000 .... | 1,47,57,880 |
| Total Assets .... .... .... | 2,46,08,120 .... | 4,50,03,372 |
| Assurances in force .... .... | 6,95,93,793 .... | 11,56,12,828 |

Form of proposal and other particulars will be sent on Application.

Head office:— Empire of India Life Building, BOMBAY. 52—13 Branch Office:— 152/3—Commercial Street, BANGALRE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪಾಶ್ಚಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪ್ರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

# ದ್ರಾಕ್ಷಾಮೃತ

ಶುದ್ಧ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣದಿಂದ ತಯಾರಿಸಿದ ಮದ್ಯ ರಹಿತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ಥಾನ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣೊಳಗೆ ಉರಿ, ಮೂಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ಸಪುಂಸಕತ್ವವಿದ್ದಲ್ಲಲದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ, ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಸೂಚನೆ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4 0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವಿ.)

52—25 ಕೊಡಗಿನ ಏಜಂಟರು—ನಾವೆಲ್ಟಿ ಸ್ಟೋರ್ಸ್, ಮಡಿಕೇರಿ

ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.

ಎ. ಎನ್. ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಭಕ್ತಾ ಬ್ರದರ್ಸ್, ಕಾಸರಗೋಡು.]

## ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(1874ರಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

| | | |
|---|---|---|
| ಹೊಸ ಪಾಲಿಸಿಗಳ ಪ್ರೀಮಿಯಂ .... .... | ರೂ. | 7,62,42,761 |
| ವಾರ್ಷಿಕ ಉತ್ಪತ್ತಿ .... .... .... | ರೂ. | 3,14,01,970 |
| ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು .... | ರೂ. | 54,20,38,518 |
| ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ .... | ರೂ. | 16,29,88,814 |
| ಫಂಡ್ಸ್ ಹೆಚ್ಚಿದ್ದು .... .... .... | ರೂ. | 15,53,88,843 |

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

| | | | | |
|---|---|---|---|---|
| ಆಗ್ರ | ಕಲ್ಲಿಕೋಟೆ | ಕರಾಚಿ | ಮೊಂಬಾಸ | ರಂಗೂನ್ |
| ಅಹ್ಮದಾಬಾದು | ಕಲ್ಕತ್ತಾ | ಕೊಲಾಲಂಪೂರು | ನಾಗಪುರ | ರಾವಲ್‌ಪಿಂಡಿ |
| ಅಜ್ಮೀರ್ | ಕೊಲಂಬೊ | ಲಾಹೋರ್ | ಪಾಟ್ನಾ | ಸಿಂಗಪುರ |
| ಅಲ್ಲಾಹಾಬಾದು | ಢಕ್ಕಾ | ಲಕ್ನೊ | ಪೂನ | ಸುಕ್ಕೂರು |
| ಅಂಬಾಲಾ | ಡೆಲ್ಲಿ | ಮದ್ರಾಸು | ರಾಯಪುರ | ತಿರುಚಿನಾಪಳ್ಳಿ |
| ಬಳ್ಳಾರಿ | ಗಯಾ | ಮಂಡಲೆ | ರಾಜಶಾಹಿ | ತಿರುವೆಂಡ್ರಮ್ |
| ಬರೇಲಿ | ಜಲಗಾಂ | ಮಂಡಕೇರಿ | ರಾಂಚಿ | ವಿಶಾಖಪಟ್ಟಣ |
| ಕೊಯಂಬುತ್ತೂರು | ಗುಂಟೂರು | ಜಲ್‌ಪೇಗುರಿ | ಒಬ್ಬಲ್‌ಪುರ | ಮಧುರೆ & ಮೈಸೂರು |

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು, 52—7

ಯಂ. ವಿ. ಮುತ್ತುಕೃಷ್ಣ ನಾಯುಡು, (ಬ್ರಾಂಚ್ ಸೆಕ್ರೆಟರಿ.)


Printed & published by P. J. Pelliarra at "Kodagu" Press, Mercara for "Kodagu" Ltd.

## NOTICE.

Mr. C. P. Appachu has been appointed by the Coffee Growers Association of India to recruit members (both full and Associate) for the association.

*Sunticoppa,* W. A. DAVIES.
*1-2-1936.* (4) (*Secretary.*)

---

## ಬೇಕಾಗಿದ್ದಾರೆ.

'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಕುಶಲರೂ, ವ್ಯಾಪಕರೂ ಆದ ಏಜಂಟರು ಬೇಕು. ಸೃದ್ಧಿಯಿಟ್ಟು ಕೆಲಸ ಮಾಡುವವರಿಗೆ ಒಳ್ಳೆ ಸುಸಂದರ್ಭ. ಯೋಗ್ಯ ಕಮಿಷನುಗಳು ಕೊಡಲಾಗುವದು. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಯಿಸಿರಿ.

ಮೇನೇಜರು,
"ಕೊಡಗು" ಲಿಮಿಟೆಡ್,

---

## ಡಾಕ್ಟರ್ ಮೇತ್ಯುಸ್ ಎಬ್ರಹಾಮ್.
## ದಂತ ವೈದ್ಯರು.
### ಗೀತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲು ತಿಳಿಯುವುದು. [52—19]

---

೪೦ ವರ್ಷಗಳಿಂದ ಅನುಭವಪಟು ಪ್ರಖ್ಯಾತ
ಹೊಂದಿದ
# ಕರ್ಕಕಂಪನಿ
ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(25—21) ಮತ್ತು ಕಂಪೆನಿ,
ಗಿರಗಾಂವ, ಮುಂಬಯಿ.

---

**SHIROMANI NARAYANACHARYA**
Choukhamba Benares City.

THIS MAN
OUR CUSTOMER

ಶಾಸ್ತ್ರಿಗಳೇ, ಪೂರ್ವಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರಮಾಣದ ಕಂಠಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 1ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ. 4ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಂಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಿತ್ರಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,
52—26 ಚೌಖಂಬಾ ಬೆನಾರಿಸ್, (ಕಾಶೀ.)

---

## ಗುಂಡು ಹೊಡೆಯುವ ಕ್ರಮಗಳು.
### ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—
ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತಿ ಉಪಯುಕ್ತ ಸೂಚನೆಗಳಿವೆ.

**Goolamhusain Allibhoy & Sons, Ltd.,**
26—21 210, Abdulrehman Street, BOMBAY 3.

---

## ಜ್ಯೇವನಪ್ರಾಶ ಲೇಹ.

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಸರ್ವ ತರಹದ ನರಗಳ ದೌರ್ಬಲ್ಯಕ್ಕೂ, ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಸ್ವರಭಂಗ, ಎದೆ ನೋವು, ಕ್ಷಯ ಮೊದಲಾದ ದೋಷಗಳಿಗೆ ಅತ್ಯುತ್ತಮ. ದೇಹ ಶಕ್ತಿಯನ್ನು ಹೆಚ್ಚಿಸಿ ಆರೋಗ್ಯವನ್ನೂ, ಜೀರ್ಣ ಶಕ್ತಿಯನ್ನೂ ಅಭಿವೃದ್ಧಿಗೊಳಿಸುವುದು. ಶಕ್ತಿ ಹೀನರು ಶಕ್ತಿವಂತರಾಗಿ ದೃಢಕಾಯರಾಗುವರು. ಪವುಂಡು 1ರ ರೂ. 2—8—0 ಕ್ಕೆ 1—5—0

## ದ್ರಾಕ್ಷಾರಿಷ್ಟ.

ದೇಹಕ್ಕೂ ಮೆದುಳಿಗೂ ಉಲ್ಲಾಸವನ್ನು ಉಂಟುಮಾಡು ಅತ್ಯುತ್ತಮ ಔಷಧಿ ಅತಿರೇಕ ದವುರ್ಬಲ್ಯದಿಂದ ಉಂಟುಮಾಡುವ ಎಂಥಾ ಸಮಯದಲ್ಲಿಯೂ ಶಕ್ತಿಯನ್ನು ಇರಗೊಳಿಸುವುದು ದೇಹದಲ್ಲಿ ತಲೆದೋರುವ ಉಷ್ಣತೆ, ಜಣಕೆಮ್ಮು, ಕ್ಷಯ ಎದೆನೋವು, ಒಳಜ್ವರ, ಪಿತ್ತದ ವಿಕಾರ, ತಲೆ ತಿರುಗುವುದು, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ ರುಚಿಯನ್ನೂ, ಹಸಿವನ್ನೂ, ಸುಖನಿದ್ರೆಯನ್ನೂ ಉಂಟುಮಾಡುವುದು

24 ಔನ್ಸ್ ಬಾಟ್ಲಿ 1ರ ರೂಪಾಯಿ 2—0—0 12 ಔನ್ಸ್ ಬಾಟ್ಲಿಗೆ ರೂಪಾಯಿ 1—2—0
ದಂತ ಕಾಂತಿ ಚೂರ್ಣ ಡಬ್ಬಿ 1ರ 0—2—6 12 ಕ್ಕೆ ರೂಪಾಯಿ 1—12—0

ಕೆಟಲಾಗಿಗೆ ಬರೆಯಿರಿ-

ಎಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್. ರಥಬೀದಿ, ಮಂಗಳೂರು.

(1) ಎ. ಬಿ. ಕಾಮತ್. ಮಹದೇವಪೇಟೆ, ಮಡಿಕೇರಿ (ಕೊಡಗು).
(52—33) (2) ಎ. ಎಸ್. ಮೂಡಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.

---

ಎರಡು ಕೆಲಸಕ್ಕೊಂದೇ ಸಾಬೂನು

## "ಮೈಸೂರು ಗಂಧದ ಸಾಬೂನು."

ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸಂರಕ್ಷಣೆಯನ್ನೂ ಮಾಡುತ್ತದೆ, ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿರುವರೋ ಯಾರು ಯಾರು ತಮ್ಮ ಚರ್ಮವನ್ನು ಎಚ್ಚರಿಕೆಯಿಂದ ಸೋದುವರೋ ಅವರೆಲ್ಲರೂ ಉಪಯೋಗಿಸುವುದು

ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—52 ಬಿಂಗಳೂರು.